# ಶ್ರೀ ಮಹೇಶ್ವರ ವ್ರತ

## ಸಾಕ್ಷಾತ್ ಶ್ರೀ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ



ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ



ಓಂ ತತ್ಪುರುಷಾಯ ವಿದ್ಮಹೇ ।

ಮಹಾದೇವಾಯ ಧೀಮಹಿ ।

ತನ್ನೋ ರುದ್ರ: ಪ್ರಚೋದಯಾತ್ ॥

ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು

# ಶ್ರೀ ಮಹೇಶ್ವರ ವ್ರತ

**ಸಾಕ್ಷಾತ್ ಶ್ರೀ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**



**ವಿಶ್ವಪತಿ**
**(ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ)**

**SHRI DESIGNS**
**VEDIC LOGO DESIGNERS**
**www.lordofsevenhills.com**
**Cell : + 91 9849443752**
**Hyderabad**
**2021**

# ಶ್ರೀ ಮಹೇಶ್ವರ ವ್ರತ

**ಸಾಕ್ಷಾತ್ ಶ್ರೀ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

© ಸರ್ವಹಕ್ಕುಗಳು ರಚಯಿತನದು

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿಯವರು ರಚಿಸಿದ ಆಧ್ಯಾತ್ಮಿಕ ಪುಸ್ತಕಗಳನ್ನು ಈ ವೆಬ್ಸೈಟಿನಿಂದ ಉಚಿತವಾಗಿ ಪ್ರಿಂಟ್ ಮಾಡಿಕೊಳ್ಳಬಹುದು**

**www.lordofsevenhills.com**

**T.V.R.K. MURTHY, M.Tech**

**Flat No.903, F-Block, Vertex Sadguru Krupa Apartments**

**Beside Sanghamitra School, Nizampet Road,**

**HYDERABAD – 500 085, India**

**Cell : + 91 9849443752**

**Email : viswapathi@yahoo.com, shridesigns@gmail.com**

# ಮುನ್ನುಡಿ

**ಬ್ರಹ್ಮಮುರಾರಿ ಸುರಾರ್ಚಿತ ಲಿಂಗಂ**
**ನಿರ್ಮಲಭಾಸಿತ ಶೋಭಿತ ಲಿಂಗಂ |**
**ಜನ್ಮಜ ದುಃಖ ವಿನಾಶಕ ಲಿಂಗಂ**
**ತತ್ಪ್ರಣಮಾಮಿ ಸದಾಶಿವ ಲಿಂಗಮ್ ||**

ಶ್ರೀ ಪರಮೇಶ್ವರನು ಕಲ್ಯಾಣ ಸ್ವರೂಪನು. ಆ ಮಹೇಶ್ವರನನ್ನು ಯಾರು ನಿತ್ಯ ನೆನೆಯುತ್ತಾರೋ ಅವರಿಗೆ ಯಾವುದೇ ಅಪಾಯಗಳು ಉಂಟಾಗುವುದಿಲ್ಲ. ಸರ್ವ ಸೌಭಾಗ್ಯಗಳು ಸಿದ್ಧಿಸುತ್ತದೆ. ಶ್ರೀ ಪರಮೇಶ್ವರನು ಭಕ್ತ ಸುಲಭನು. ಆ ಸ್ವಾಮಿಯನ್ನು ಒಮ್ಮೆ ನೆನೆದರೆ ಸಾಕು, ಬಹಳ ಆನಂದಪಡುತ್ತಾನೆ. ನಿರ್ಮಲ ಮನಸ್ಸಿನಿಂದ ಆರಾಧಿಸಿದವರಿಗೆ, ಎಲ್ಲಾ ದುಃಖಗಳಿಂದ ವಿಮುಕ್ತಿ ಸಿಗುತ್ತದೆ. ಶಿವ ಭಕ್ತರಿಗೆ ನವಗ್ರಹಗಳ ತೊಂದರೆ ಉಂಟಾಗುವುದಿಲ್ಲ. ಯಾವಾಗಲೂ ಶ್ರೀ ಪರಮೇಶ್ವರನನ್ನು ಸ್ಮರಿಸುವವರಿಗೆ ಯಾವ ಗ್ರಹ ದೋಷಗಳೂ ಉಂಟಾಗುವುದಿಲ್ಲ.

ಆ ಶ್ರೀನಿವಾಸನ ಅನುಗ್ರಹದಿಂದ ಇಲ್ಲಿಯವರೆಗೆ ನಾನು ಆ ಸ್ವಾಮಿಯ ಲೀಲಾ ವಿಶೇಷಗಳ ಮೇಲೆ ಹದಿನಾರು ಪುಸ್ತಕಗಳನ್ನು ರಚಿಸಿದೆನು. ಆ ಪುಸ್ತಕಗಳೆಲ್ಲಾ ದೇಶ ವಿದೇಶಗಳಲ್ಲಿ ಭಕ್ತರಿಂದ ನಿತ್ಯ ಪಠಿಸುತ್ತಿರುವುದು ಆ ಸ್ವಾಮಿಯ ಅನುಗ್ರಹವಲ್ಲದೆ ಮತ್ತೇನಲ್ಲ. ಈ ಪುಸ್ತಕಗಳನ್ನು ಓದಿದ ಪ್ರತಿಯೊಬ್ಬರಿಗೂ ಅನೇಕ ಶುಭಗಳು ಜರುಗುತ್ತಿವೆ. ಆ ಶ್ರೀನಿವಾಸನ ಅನುಗ್ರಹದಿಂದ ಇವರೆಲ್ಲರು ತುಂಬಾ ಸುಖಸಂತೋಷಗಳಿಂದ ಜೀವಿಸುತ್ತಿದ್ದಾರೆ. ಈ ಪುಸ್ತಕಗಳಲ್ಲಿ ಶ್ರೀ ವೇಂಕಟೇಶ್ವರ ವ್ರತಕಲ್ಪ, ಶ್ರೀ ಲಕ್ಷ್ಮೀನರಸಿಂಹ ವ್ರತಕಲ್ಪ, ಶ್ರೀ ಆನಂದ ಆಂಜನೇಯ - ಭಕ್ತರನ್ನು ಬಹಳವಾಗಿ ಸಂತೋಷಪಡಿಸುತ್ತಿವೆ. ಈ ಮೂರು ವ್ರತಗಳನ್ನು ನಿತ್ಯ ತುಂಬಾ ಭಕ್ತರ ಮನೆಗಳಲ್ಲಿ, ಅನೇಕ ದೇವಾಲಯಗಳಲ್ಲಿಯೂ ಆಚರಿಸಲ್ಪಡುತ್ತಿದೆ. ಇದಕ್ಕೆ ಮಿಗಿಲಾದ ಭಾಗ್ಯ ಮತ್ತೇನಿದೆ?

ಆ ಪರಮೇಶ್ವರನ ಅನುಗ್ರಹದಿಂದ ಈ 'ಶ್ರೀ ಮಹೇಶ್ವರ ವ್ರತ'ವನ್ನು ರಚಿಸಿದೆನು. ನಾನು ಬರೆದ ಪ್ರತಿ ಪುಸ್ತಕದ ಹಿಂದೆ ದೇವರ ಲೀಲೆಗಳನ್ನು ತುಂಬಾ ನೋಡಿದೆನು. ಹಾಗೆ ಈ 'ಶ್ರೀ ಮಹೇಶ್ವರ ವ್ರತ'ವನ್ನು ಬರೆಯುವಾಗ ಕೂಡ ಅನೇಕ ವಿಶೇಷಗಳು ಜರುಗಿದವು. ಪುಸ್ತಕವನ್ನು ಬರೆಯಲು ಪ್ರಾರಂಭಿಸುವಾಗ ಆಕಸ್ಮಿಕವಾಗಿ ಶಂಕರಮಠದ ಶ್ರೀ ಚಂದ್ರಮೌಳೀಶ್ವರ ಸ್ವಾಮಿಯ ದರ್ಶನಭಾಗ್ಯವು ಲಭಿಸಿತು. ಆನಂತರ ವರಸೆಯಾಗಿ ಮತ್ತಿನ್ನೆರಡು ಶ್ರೀ ಪರಮೇಶ್ವರ ದೇವಾಲಯಗಳನ್ನು ಸಂದರ್ಶಿಸಿದೆನು. ಈ ಪುಸ್ತಕದ ಪ್ರತಿಯೊಂದು ಅಕ್ಷರವೂ ಈಶ್ವರಾನುಗ್ರಹವೇ. ಈ ಪುಸ್ತಕವನ್ನು ಬರೆಯುವಷ್ಟು ದಿನಗಳು ಆ ಪರಮೇಶ್ವರನ ಪ್ರಿಯಕುಮಾರನಾದ ಶ್ರೀ ಸುಬ್ರಹ್ಮಣ್ಯೇಶ್ವರನು ಚಿಕ್ಕಬಾಲಕನ ರೂಪದಲ್ಲಿ ಕಿರುನಗೆಯೊಂದಿಗೆ ನನ್ನೆದುರಲ್ಲಿ ದರ್ಶನವನ್ನು ಕೊಡುತ್ತಿದ್ದನು. ಆ ಅದ್ಭುತ ದೃಶ್ಯವು ಈಗಲೂ ಕೂಡ ನನ್ನ ಕಣ್ಣಮುಂದೆ ಸುಳಿದಾಡುತ್ತಿದೆ. ಅತಿ ಸಾಮಾನ್ಯನಾದ ನನಗೆ ಇಂಥಹ ಅನುಗ್ರಹವನ್ನು ಪ್ರಸಾದಿಸಿದ ಆ ದೇವತೆಗಳೆಲ್ಲರಿಗೂ ನನ್ನ ನಮಸ್ಕಾರಗಳು. ಮತ್ತೊಂದು ವಿಶೇಷವೇನೆಂದರೆ, ಈ ಪುಸ್ತಕವನ್ನು ಡಿ.ಟಿ.ಪಿ. ಮಾಡುವುದು ಕೂಡಾ ಆಕಸ್ಮಿಕವಾಗಿ ಮಹೇಶ್ವರನ ಜನ್ಮನಕ್ಷತ್ರವಾದ ಆರ್ದ್ರ ನಕ್ಷತ್ರದಲ್ಲಿ ಪ್ರಾರಂಭಿಸುವುದು ಆ ಸ್ವಾಮಿಯ ಅನುಗ್ರವೆಂದೇ ತಿಳಿಯುತ್ತಿದ್ದೇನೆ.

ಈ ಪುಸ್ತಕ ರಚನೆಗೆ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಸಹಕರಿಸಿದ ಪ್ರತಿಯೊಬ್ಬರಿಗೂ, ಈ ವ್ರತವನ್ನು ಆಚರಿಸಿದ ತಮಗೂ, ವ್ರತ ಕಥೆಗಳನ್ನು ಹೇಳಿದವರಿಗೂ, ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ, ಸಕಲ ಆಯುರಾರೋಗ್ಯ ಸೌಭಾಗ್ಯಗಳು ಸಿಗಲಿ ಎಂದು ಆ ಶ್ರೀ ಉಮಾ ಮಹೇಶ್ವರ ದೇವರನ್ನು ಪ್ರಾರ್ಥಿಸುತ್ತಿದ್ದೇನೆ.

|| ಸರ್ವೇ ಜನಾಃ ಸುಖಿನೋ ಭವಂತು | ಸಮಸ್ತ ಸನ್ಮಂಗಳಾನಿ ಭವಂತು ||
|| ಶ್ರೀ ಉಮಾ ಮಹೇಶ್ವರ ಕಟಾಕ್ಷ ಸಿದ್ಧಿರಸ್ತು ||

ಹೈದರಾಬಾದ್ **ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**
ದಿನಾಂಕ: 16-1-2021

***********

# ಈ ವ್ರತವನ್ನು ಹೇಗೆ ಆಚರಿಸಬೇಕು?

- ಈ ವ್ರತವನ್ನು ಯಾರಾದರೂ, ಯಾವಾಗಲಾದರೂ, ವಯಸ್ಸಿನಿಂದಾಗಲೀ, ಕುಲದಿಂದಾಗಲೀ, ಭೇದಭಾವವಿಲ್ಲದೇ ಓದಬಹುದು. ಸ್ತ್ರೀ - ಪುರುಷ ಬೇಧವಿಲ್ಲ. ಯಾವ ಮಾಸದಲ್ಲಾಗಲೀ, ಯಾವ ದಿನಗಳಲ್ಲಾಗಲೀ ಓದಬಹುದು. ಏಕಾದಶಿ, ಹುಣ್ಣಿಮೆ ತಿಥಿಗಳಲ್ಲಾಗಲೀ, ಆರ್ದ್ರ ನಕ್ಷತ್ರದ ದಿನ ಪಠಣಮಾಡಿದರೆ ಅತ್ಯಂತ ಶುಭಪ್ರದ. ಸೋಮವಾರದ ದಿನ ಓದಿದರೆ ತುಂಬಾ ಉತ್ತಮ. ಕಾರ್ತೀಕ ಸೋಮವಾರದ ದಿನ ಈ ವ್ರತವನ್ನು ಆಚರಿಸಿದರೆ ಜನ್ಮ ಜನ್ಮದ ಪಾಪಗಳು ನಶಿಸುತ್ತವೆ. ಬಹಳ ಪುಣ್ಯವು ಲಭಿಸುತ್ತದೆ.  ಈ ವ್ರತವನ್ನು ಆಚರಿಸುವ ದಿನ ಖಂಡಿತಾ ಉಪವಾಸ ಇರಬೇಕೆಂಬ ನಿಯಮ ಇರುವುದಿಲ್ಲ.

- ಈ ವ್ರತವನ್ನು ಆಚರಿಸುವ ಮೊದಲು ಒಂದು ಬಾರಿ ಮನಸ್ಸಿನಲ್ಲೇ ಶ್ರೀ ವಿನಾಯಕನಿಗೆ, ನವಗ್ರಹದೇವತೆಗಳಿಗೆ, ಅಷ್ಟದಿಕ್ಪಾಲಕರಿಗೆ ನಮಸ್ಕರಿಸಬೇಕು. ಆನಂತರ  ನಿಮ್ಮ ಹೆಸರು, ನಿಮ್ಮ ಕುಟುಂಬದ ಸದಸ್ಯರ ಹೆಸರುಗಳು, ನಕ್ಷತ್ರ ಮತ್ತು ಗೋತ್ರವನ್ನು ಮನಸ್ಸಿನಲ್ಲೇ ಸ್ಮರಿಸಿ ವ್ರತವನ್ನು ಪ್ರಾರಂಭಿಸಬೇಕು. ಶ್ರೀ ಪಾರ್ವತಿ ಪರಮೇಶ್ವರರ ಅಷ್ಟೋತ್ತರ ನಾಮಗಳನ್ನು ಪಠಿಸಬೇಕು. ಶ್ರೀ ದೇವರ ಅಂಗ ಪೂಜೆಮಾಡಿ ನಂತರ ಈ ಪುಸ್ತಕದಲ್ಲಿರುವ ಐದು ಕಥೆಗಳನ್ನು ಓದಿ ದೇವರಿಗೆ ನಿಮ್ಮ ಯೋಗ್ಯತಾನುಸಾರ  ಯಾವುದಾದರು ಹಣ್ಣು ನಿವೇದಿಸಬೇಕು.

- ಈ ವ್ರತವನ್ನು ಆಚರಿಸುವಾಗ ಪತಿ-ಪತ್ನಿ ಇಬ್ಬರು ಖಂಡಿತಾ ಒಟ್ಟಿಗೆ ಇದ್ದು ಆಚರಿಸಬೇಕೆಂಬ ನಿಯಮವಿಲ್ಲ.  ಪತಿಗೆ ಅನುಕೂಲವಾದಾಗ ಪತಿ, ಪತ್ನಿಗೆ ಅನುಕೂಲವಾದಾಗ ಪತ್ನಿ ಹೀಗೆ ಅವರವರ ಅನುಕೂಲದಂತೆ ಅವರು ಆಚರಿಸಬಹುದು. ಅನುಕೂಲವಾದರೆ ಇಬ್ಬರೊಟ್ಟಿಗೆ ಆಚರಿಸಬಹುದು.

- ದುರದೃಷ್ಟದಿಂದ ಪತ್ನಿಯನ್ನು ಕಳೆದುಕೊಂಡ ಪುರುಷರು, ಪತಿಯನ್ನು ಕಳೆದುಕೊಂಡ ಮಹಿಳೆಯರು ಕೂಡ ನೀರಭ್ಯಂತರವಾಗಿ ಈ ವ್ರತವನ್ನು ಆಚರಿಸಬಹುದು. ಈ ವ್ರತವನ್ನು ಆಚರಿಸಿದವರಿಗೆ ಪೂರ್ತಿ ಮನಶಾಂತಿ ಉಂಟಾಗುತ್ತದೆ.

- ಪ್ರತಿ ಸೋಮವಾರದ ದಿನ ಈ ಪುಸ್ತಕದಲ್ಲಿರುವ ಐದು ಕಥೆಗಳನ್ನು ಓದಿ, ಸ್ವಾಮಿಗೆ ಬಾಳೆಹಣ್ಣು ಅಥವಾ ಪೇರಳೆಹಣ್ಣನ್ನು ನೈವೇದ್ಯವಿಟ್ಟು, ಸ್ವೀಕರಿಸಿದರೆ ಯಾವುದೇ ರೀತಿಯ ಅನಾರೋಗ್ಯವಾದರೂ ಕೂಡಲೆ ವಾಸಿಯಾಗುತ್ತದೆ. ಯಾವುದೇ ರೀತಿಯ ಆಪತ್ತುಗಳು ಉಂಟಾಗುವುದಿಲ್ಲ. ಅಪಮೃತ್ಯು ಭಯವು ಇರುವುದಿಲ್ಲ. ಕಥೆಗಳನ್ನು ಓದಲು ಶಕ್ತಿಯಿಲ್ಲದವರಿಗೆ, ಅವರ ಬಂಧುಬಳಗದವರು ಯಾರಾದರೂ ಓದಿ, ಕೇಳಿಸಿದರೆ, ಮಹಾಫಲವು ಸಿಗುತ್ತದೆ.

- ಪ್ರತಿ ಸೋಮವಾರ, ಪರಮೇಶ್ವರನ ದೇವಾಲಯದಲ್ಲಿ ಈ ಪುಸ್ತಕವನ್ನು ಪಠಿಸಿದರೆ, ಆ ದೇವಾಲಯಗಳು ಮಹಾಮಾನ್ವಿತವಾದ ದಿವ್ಯಕ್ಷೇತ್ರವೆಂದು ಹೆಸರೊಂದುತ್ತದೆ. ಅಲ್ಲಿಗೆ

ಬರುವ ಭಕ್ತರೆಲ್ಲರಿಗೂ ಪರಮೇಶ್ವರನ ಅನುಗ್ರಹವು ಸಿಕ್ಕಿ ಸುಖಸಂತೋಷಗಳಿಂದ ಜೀವಿಸುತ್ತಾರೆ.

- ಶ್ರೀ ಪರಮೇಶ್ವರನ ಜ್ಯೋತಿರ್ಲಿಂಗ ಕ್ಷೇತ್ರಗಳಲ್ಲಾಗಲೀ, ಯಾವುದೇ ದಿವ್ಯಕ್ಷೇತ್ರಗಳಲ್ಲಾಗಲೀ, ಈ ವ್ರತವನ್ನು ಆಚರಿಸಿದರೆ ಕೆಲವು ಕೋಟಿ ಜನ್ಮದ ಪಾಪವು ನಶಿಸುತ್ತದೆ. ವ್ರತವನ್ನು ಆಚರಿಸಿದ ಕೂಡಲೇ ಶರೀರದಲ್ಲಿಯ ರೋಗಗಳೆಲ್ಲಾ ನಿವಾರಣೆಯಾಗುತ್ತದೆ. ಶರೀರಕ್ಕೆ ಹೊಸ ತೇಜಸ್ಸು ಉಂಟಾಗುತ್ತದೆ. ಧೀರ್ಘಾಯುಷ್ಯದಿಂದ ಸುಖವಾಗಿ ಜೀವಿಸುತ್ತಾರೆ.

- ಸಂತಾನವನ್ನು ಬಯಸುವವರು ಸ್ವಾಮಿಯ ದೇವಾಲಯಲ್ಲಿ ಸೋಮ, ಮಂಗಳ, ಬುಧವಾರ ಮೂರು ದಿನಗಳು ಕ್ರಮವಾಗಿ ಈ ಪುಸ್ತಕವನ್ನು ಪಠಿಸಿದರೆ, ಖಂಡಿತವಾಗಿ ಒಳ್ಳೆಯ ಸಂತಾನವನ್ನು ಪಡೆಯುತ್ತಾರೆ. ವಿವಾಹವಾಗದ ಯುವಕ, ಯುವತಿಯರು ಈ ವಿಧವಾಗಿ ವ್ರತವನ್ನು ಆಚರಿಸಿದರೆ, ಶೀಘ್ರದಲ್ಲಿಯೇ ಅವರಿಗೆ ವಿವಾಹವು ಜರುಗುತ್ತದೆ.

- ದೂರದೇಶದಲ್ಲಿರುವ ನಿಮ್ಮ ಮಕ್ಕಳ ನಿಮಿತ್ತ, ನಿಮ್ಮ ಬಂಧುಗಳ ನಿಮಿತ್ತ, ನೀವು ಕೂಡ ಓದಬಹುದು. ಅವರಿಗೆ ವಿದ್ಯೆ, ವಿವಾಹ, ಸಂತಾನ, ಉದ್ಯೋಗ, ಆರೋಗ್ಯಕ್ಕಾಗಿ ಈ ಪುಸ್ತಕವನ್ನು ಕ್ರಮವಾಗಿ ಸೋಮವಾರದಿಂದ ಮೂರು ದಿನಗಳು ಶಿವಾಲಯದಲ್ಲಿ ಓದಿದರೆ ತಕ್ಷಣ ಫಲಿತವು ಸಿಗುತ್ತದೆ.

- ಅನುಕೂಲವಾದರೆ ಈ ವ್ರತವನ್ನು ಪುರೋಹಿತರ ಸಹಾಯದಿಂದ ಆಚರಿಸಿದರೆ ಒಳ್ಳೆಯದು. ಕಲಶ ಸ್ಥಾಪನೆ ಮಾಡಿ ಅಷ್ಟದಿಕ್ಪಾಲಕರನ್ನು, ನವಗ್ರಹದೇವತೆಗಳನ್ನು, ಲೋಕಪಾಲಕರನ್ನು ಮಂಟಪದಲ್ಲಿ ಆಯಾ ದಿಕ್ಕಿನಲ್ಲಿ ಆವಾಹನೆ ಮಾಡಿ ಪೂರ್ತಿ ವಿಧಾನದಿಂದ ಈ ವ್ರತವನ್ನು ಆಚರಿಸಿದರೆ ಶುಭಪ್ರದ.

ಈ ವಿಧವಾಗಿ, ಯಾವ ರೀತಿಯಲ್ಲಾಗಲಿ, ಯಾವ ದಿನದಲ್ಲಾಗಲಿ ಈ ಪುಸ್ತಕವನ್ನು ಓದಿ, ಶ್ರೀ ಪಾರ್ವತಿ ಪರಮೇಶ್ವರರ ಅನುಗ್ರಹವನ್ನು ಪಡೆಯಬಹುದು.

***********

# ಶ್ರೀ ಮಹೇಶ್ವರ ವ್ರತ

## ಅಥ ಅಂಗ ಪೂಜ ಪೂಜ

ಓಂ ಶಂಕರಾಯ ನಮಃ | ಪಾದೌ ಪೂಜಯಾಮಿ |
ಓಂ ಶಿವಾಯ ನಮಃ | ಜಂಘೇ ಪೂಜಯಾಮಿ |
ಓಂ ಮಹೇಶ್ವರಾಯ ನಮಃ | ಜಾನುನೀ ಪೂಜಯಾಮಿ |
ಓಂ ತ್ರಿಲೋಕೇಶಾಯ ನಮಃ | ಊರೂ ಪೂಜಯಾಮಿ |
ಓಂ ವೃಷಭರುಢಾಯ ನಮಃ | ಗುಹ್ಯಂ ಪೂಜಯಾಮಿ |
ಓಂ ಭಸ್ಮೋದ್ಧೂಳಿತ ವಿಗ್ರಹಾಯ ನಮಃ | ಕಟಿಂ ಪೂಜಯಾಮಿ |
ಓಂ ಮೃತ್ಯುಂಜಯಾಯ ನಮಃ | ನಾಭಿO ಪೂಜಯಾಮಿ |
ಓಂ ರುದ್ರಾಯ ನಮಃ | ಉದರಂ ಪೂಜಯಾಮಿ |
ಓಂ ಸಾಂಬಾಯ ನಮಃ | ಹೃದಯಂ ಪೂಜಯಾಮಿ |
ಓಂ ಭುಜಂಗ ಭೂಷಣಾಯ ನಮಃ | ಹಸ್ತೌ ಪೂಜಯಾಮಿ |
ಓಂ ಸದಾಶಿವಾಯ ನಮಃ | ಭುಜೌ ಪೂಜಯಾಮಿ |
ಓಂ ವಿಘ್ನೇಶ್ವರಾಯ ನಮಃ | ಕಂಠಂ ಪೂಜಯಾಮಿ |
ಓಂ ಗಿರೀಶಾಯ ನಮಃ | ವದನಂ ಪೂಜಯಾಮಿ |
ಓಂ ತ್ರಿಪುರಾಂತಕಾಯ ನಮಃ | ನೇತ್ರೇ ಪೂಜಯಾಮಿ |
ಓಂ ವಿರೂಪಾಕ್ಷಾಯ ನಮಃ | ಲಲಾಟಂ ಪೂಜಯಾಮಿ |
ಓಂ ಗಂಗಾಧರಾಯ ನಮಃ | ಶಿರಃ ಪೂಜಯಾಮಿ |
ಓಂ ಜಟಾಧರಾಯ ನಮಃ | ಮೌಳಿಂ ಪೂಜಯಾಮಿ |
ಓಂ ಪಶುಪತಯೇ ನಮಃ | ಸರ್ವಾಣ್ಯಂಗಾನಿ ಪೂಜಯಾಮಿ |
ಶ್ರೀ ಪರಮೇಶ್ವರ ಸ್ವಾಮಿನೇ ನಮಃ | ದಿವ್ಯಸುಂದರವಿಗ್ರಹಂ ಪೂಜಯಾಮಿ ||
ಶುದ್ಧಸ್ಫಟಿಕ ಸಂಕಾಶಂ ನಾಗಾಭರಣಭೂಷಿತಾಂ |
ವೇದವೇದಾಂತತತ್ವಜ್ಞO ವಂದೇ ಶಂಭುಮುಮಾಪತಿO ||

*******

## ಶ್ರೀ ಶಿವಾಷ್ಟೋತ್ತರ ಶತನಾಮಾವಳಿ:

ಓಂ ಶಿವಾಯ ನಮಃ |
ಓಂ ಮಹೇಶ್ವರಾಯ ನಮಃ |
ಓಂ ಶಂಭವೇ ನಮಃ |
ಓಂ ಪಿನಾಕಿನೇ ನಮಃ |
ಓಂ ಶಶಿಶೇಖರಾಯ ನಮಃ |
ಓಂ ವಾಮದೇವಾಯ ನಮಃ |
ಓಂ ವಿರೂಪಾಕ್ಷಾಯ ನಮಃ |
ಓಂ ಕಪರ್ದಿನೇ ನಮಃ |
ಓಂ ನೀಲಲೋಹಿತಾಯ ನಮಃ |
ಓಂ ಶಂಕರಾಯ ನಮಃ | (10)

ಓಂ ಶೂಲಪಾಣಯೇ ನಮಃ |
ಓಂ ಖಟ್ವಾಂಗಿನೇ ನಮಃ |
ಓಂ ವಿಷ್ಣುವಲ್ಲಭಾಯ ನಮಃ |
ಓಂ ಶಿಪಿವಿಷ್ಟಾಯ ನಮಃ |
ಓಂ ಅಂಬಿಕಾನಾಥಾಯ ನಮಃ |
ಓಂ ಶ್ರೀಕಂಠಾಯ ನಮಃ |
ಓಂ ಭಕ್ತವತ್ಸಲಾಯ ನಮಃ |
ಓಂ ಭವಾಯ ನಮಃ |
ಓಂ ಶರ್ವಾಯ ನಮಃ |
ಓಂ ತ್ರಿಲೋಕೇಶಾಯ ನಮಃ | (20)
ಓಂ ಶಿತಿಕಂಠಾಯ ನಮಃ |
ಓಂ ಶಿವಾಪ್ರಿಯಾಯ ನಮಃ |
ಓಂ ಉಗ್ರಾಯ ನಮಃ |
ಓಂ ಕಪಾಲಿನೇ ನಮಃ |
ಓಂ ಕೌಮಾರಯೇ ನಮಃ |
ಓಂ ಅಂಧಕಾಸುರ ಸೂದನಾಯ ನಮಃ |
ಓಂ ಗಂಗಾಧರಾಯ ನಮಃ |
ಓಂ ಲಲಾಟಾಕ್ಷಾಯ ನಮಃ |
ಓಂ ಕಾಲಕಾಲಾಯ ನಮಃ |
ಓಂ ಕೃಪಾನಿಧಯೇ ನಮಃ | (30)
ಓಂ ಭೀಮಾಯ ನಮಃ |
ಓಂ ಪರಶುಹಸ್ತಾಯ ನಮಃ |
ಓಂ ಮೃಗಪಾಣಯೇ ನಮಃ |
ಓಂ ಜಟಾಧರಾಯ ನಮಃ |
ಓಂ ಕೈಲಾಸವಾಸಿನೇ ನಮಃ |
ಓಂ ಕವಚಿನೇ ನಮಃ |
ಓಂ ಕಠೋರಾಯ ನಮಃ |
ಓಂ ತ್ರಿಪುರಾಂತಕಾಯ ನಮಃ |
ಓಂ ವೃಷಾಂಕಾಯ ನಮಃ |
ಓಂ ವೃಷಭಾರೂಢಾಯ ನಮಃ | (40)
ಓಂ ಭಸ್ಮೋದ್ಧೂಳಿತ ವಿಗ್ರಹಾಯ ನಮಃ |
ಓಂ ಸಾಮಪ್ರಿಯಾಯ ನಮಃ |
ಓಂ ಸ್ವರಮಯಾಯ ನಮಃ |
ಓಂ ತ್ರಯೀಮೂರ್ತಯೇ ನಮಃ |
ಓಂ ಅನೀಶ್ವರಾಯ ನಮಃ |
ಓಂ ಸರ್ವಜ್ಞಾಯ ನಮಃ |
ಓಂ ಪರಮಾತ್ಮನೇ ನಮಃ |
ಓಂ ಸೋಮಸೂರ್ಯಾಗ್ನಿ ಲೋಚನಾಯ ನಮಃ |

ಓಂ ಹವಿಷೇ ನಮಃ |
ಓಂ ಯಜ್ಞಮಯಾಯ ನಮಃ | (50)
ಓಂ ಸೋಮಾಯ ನಮಃ |
ಓಂ ಪಂಚವಕ್ತ್ರಾಯ ನಮಃ |
ಓಂ ಸದಾಶಿವಾಯ ನಮಃ |
ಓಂ ವಿಶ್ವೇಶ್ವರಾಯ ನಮಃ |
ಓಂ ವೀರಭದ್ರಾಯ ನಮಃ |
ಓಂ ಗಣನಾಥಾಯ ನಮಃ |
ಓಂ ಪ್ರಜಾಪತಯೇ ನಮಃ |
ಓಂ ಹಿರಣ್ಯರೇತಸೇ ನಮಃ |
ಓಂ ದುರ್ಧರ್ಷಾಯ ನಮಃ |
ಓಂ ಗಿರೀಶಾಯ ನಮಃ | (60)
ಓಂ ಗಿರಿಶಾಯ ನಮಃ |
ಓಂ ಅನಘಾಯ ನಮಃ |
ಓಂ ಭುಜಂಗ ಭೂಷಣಾಯ ನಮಃ |
ಓಂ ಭರ್ಗಾಯ ನಮಃ |
ಓಂ ಗಿರಿಧನ್ವಯೇ ನಮಃ |
ಓಂ ಗಿರಿಪ್ರಿಯಾಯ ನಮಃ |
ಓಂ ಕೃತ್ತಿವಾಸಸೇ ನಮಃ |
ಓಂ ಪುರಾರಾತಯೇ ನಮಃ |
ಓಂ ಭಗವತೇ ನಮಃ |
ಓಂ ಪ್ರಮಥಾಧಿಪಾಯ ನಮಃ | (70)
ಓಂ ಮೃತ್ಯುಂಜಯಾಯ ನಮಃ |
ಓಂ ಸೂಕ್ಷ್ಮತನವೇ ನಮಃ |
ಓಂ ಜಗದ್ವ್ಯಾಪಿನೇ ನಮಃ |
ಓಂ ಜಗದ್ಗುರವೇ ನಮಃ |
ಓಂ ವ್ಯೋಮಕೇಶಾಯ ನಮಃ |
ಓಂ ಮಹಾಸೇನ ಜನಕಾಯ ನಮಃ |
ಓಂ ಚಾರುವಿಕ್ರಮಾಯ ನಮಃ |
ಓಂ ರುದ್ರಾಯ ನಮಃ |
ಓಂ ಭೂತಪತಯೇ ನಮಃ |
ಓಂ ಸ್ಥಾಣವೇ ನಮಃ | (80)
ಓಂ ಅಹಿರ್ಭುಧ್ನ್ಯಾಯ ನಮಃ |
ಓಂ ದಿಗಂಬರಾಯ ನಮಃ |
ಓಂ ಅಷ್ಟಮೂರ್ತಯೇ ನಮಃ |
ಓಂ ಅನೇಕಾತ್ಮನೇ ನಮಃ |
ಓಂ ಸಾತ್ತ್ವಿಕಾಯ ನಮಃ |
ಓಂ ಶುದ್ಧವಿಗ್ರಹಾಯ ನಮಃ |

ಓಂ ಶಾಶ್ವತಾಯ ನಮಃ |
ಓಂ ಖಂಡಪರಶವೇ ನಮಃ |
ಓಂ ಅಜಾಯ ನಮಃ |
ಓಂ ಪಾಶವಿಮೋಚಕಾಯ ನಮಃ | (90)
ಓಂ ಮೃಡಾಯ ನಮಃ |
ಓಂ ಪಶುಪತಯೇ ನಮಃ |
ಓಂ ದೇವಾಯ ನಮಃ |
ಓಂ ಮಹಾದೇವಾಯ ನಮಃ |
ಓಂ ಅವ್ಯಯಾಯ ನಮಃ |
ಓಂ ಹರಯೇ ನಮಃ |
ಓಂ ಪೂಷದಂತಭಿದೇ ನಮಃ |
ಓಂ ಅವ್ಯಗ್ರಾಯ ನಮಃ |
ಓಂ ದಕ್ಷಾಧ್ವರಹರಾಯ ನಮಃ |
ಓಂ ಹರಾಯ ನಮಃ | (100)
ಓಂ ಭಗನೇತ್ರಭಿದೇ ನಮಃ |
ಓಂ ಅವ್ಯಕ್ತಾಯ ನಮಃ |
ಓಂ ಸಹಸ್ರಾಕ್ಷಾಯ ನಮಃ |
ಓಂ ಸಹಸ್ರಪಾದೇ ನಮಃ |
ಓಂ ಅಪಪರ್ಗಪ್ರದಾಯ ನಮಃ |
ಓಂ ಅನಂತಾಯ ನಮಃ |
ಓಂ ತಾರಕಾಯ ನಮಃ |
ಓಂ ಪರಮೇಶ್ವರಾಯ ನಮಃ |
ಓಂ ಗಂಗಾಪಾತಯೇ ನಮಃ |
ಓಂ ನೀಲಕಂಠೇಶ್ವರಾಯ ನಮಃ | (110)

**|| ಶ್ರೀ ಶಿವಾಷ್ಟೋತ್ತರ ಶತನಾಮಾವಳಿ: ಸಮಾಪ್ತಂ ||**

*******

## ಶ್ರೀ ಪಾರ್ವತೀ ಅಷ್ಟೋತ್ತರ ಶತನಾಮಾವಳಿ:

ಓಂ ಪಾರ್ವತ್ಯೈ ನಮಃ |
ಓಂ ಮಹಾದೇವ್ಯೈ ನಮಃ |
ಓಂ ಜಗನ್ಮಾತ್ರೇ ನಮಃ |
ಓಂ ಸರಸ್ವತ್ಯೈ ನಮಃ |
ಓಂ ಚಂಡಿಕಾಯ್ಯೆ ನಮಃ |
ಓಂ ಲೋಕಜನನ್ಯೈ ನಮಃ |
ಓಂ ಸರ್ವದೇವಾಧಿದೇವತಾಯ್ಯೆ ನಮಃ |
ಓಂ ಗೌರ್ಯೈ ನಮಃ |
ಓಂ ಪರಮಾಯ್ಯೆ ನಮಃ |

ಓಂ ಈಶಾಯೈ ನಮಃ | (10)
ಓಂ ನಾಗೇಂದ್ರತನಯಾಯೈ ನಮಃ |
ಓಂ ಸತ್ಯೈ ನಮಃ |
ಓಂ ಬ್ರಹ್ಮಚಾರಿಣ್ಯೈ ನಮಃ |
ಓಂ ಶರ್ವಾಣ್ಯೈ ನಮಃ |
ಓಂ ದೇವಮಾತ್ರೇ ನಮಃ |
ಓಂ ತ್ರಿಲೋಚನ್ಯೈ ನಮಃ |
ಓಂ ಬ್ರಹ್ಮಣ್ಯೈ ನಮಃ |
ಓಂ ವೈಷ್ಣವ್ಯೈ ನಮಃ |
ಓಂ ರೌದ್ರ್ಯೈ ನಮಃ |
ಓಂ ಕಾಳರಾತ್ರ್ಯೈ ನಮಃ | (20)
ಓಂ ತಪಸ್ವಿನ್ಯೈ ನಮಃ |
ಓಂ ಶಿವಧೂತ್ಯೈ ನಮಃ |
ಓಂ ವಿಶಾಲಾಕ್ಷ್ಯೈ ನಮಃ |
ಓಂ ಚಾಮುಂಡಾಯೈ ನಮಃ |
ಓಂ ವಿಷ್ಣುಸೋದರ್ಯೈ ನಮಃ |
ಓಂ ಚಿತ್ಕಳಾಯೈ ನಮಃ |
ಓಂ ಚಿನ್ಮಯಾಕಾರಾಯೈ ನಮಃ |
ಓಂ ಮಹಿಷಾಸುರ ಮರ್ಧಿನ್ಯೈ ನಮಃ |
ಓಂ ಕಾತ್ಯಾಯಿನ್ಯೈ ನಮಃ |
ಓಂ ಕಾಳರೂಪಾಯೈ ನಮಃ | (30)
ಓಂ ಗಿರಿಜಾಯೈ ನಮಃ |
ಓಂ ಮೇನಕಾತ್ಮಜಾಯೈ ನಮಃ |
ಓಂ ಭವಾನ್ಯೈ ನಮಃ |
ಓಂ ಶ್ರೀಮಾತ್ರೇ ನಮಃ |
ಓಂ ಮಹಾಗೌರ್ಯೈ ನಮಃ |
ಓಂ ರಮಾಯೈ ನಮಃ |
ಓಂ ರಾಮಾಯೈ ನಮಃ |
ಓಂ ಶುಚಿಸ್ಮಿತಾಯೈ ನಮಃ |
ಓಂ ಬ್ರಹ್ಮಸ್ವರೂಪಿಣ್ಯೈ ನಮಃ |
ಓಂ ರಾಜ್ಯಲಕ್ಷ್ಮ್ಯೈ ನಮಃ | (40)
ಓಂ ಶಿವಪ್ರಿಯಾಯೈ ನಾರಾಯಣ್ಯೈ ನಮಃ |
ಓಂ ಮಹಾಶಕ್ತ್ಯೈ ನಮಃ |
ಓಂ ನವೋದಯೈ ನಮಃ |
ಓಂ ಭಾಗ್ಯದಾಯಿನ್ಯೈ ನಮಃ |
ಓಂ ಅನ್ನಪೂರ್ಣಾಯೈ ನಮಃ |
ಓಂ ಸದಾನಂದಾಯೈ ನಮಃ |
ಓಂ ಯೌವಾನಾಯೈ ನಮಃ |

ಓಂ ಮೊಹಿನ್ಯೈ ನಮಃ |
ಓಂ ಅಜ್ಞಾನಶುದ್ಧ್ಯೈ ನಮಃ |
ಓಂ ಜ್ಞಾನಗಮ್ಯಾಯೈ ನಮಃ | (50)
ಓಂ ನಿತ್ಯಾಯೈ ನಮಃ |
ಓಂ ನಿತ್ಯಸ್ವರೂಪಿಣ್ಯೈ ನಮಃ |
ಓಂ ಕಮಲಾಯೈ ನಮಃ |
ಓಂ ಕಮಲಾಕಾರಾಯೈ ನಮಃ |
ಓಂ ರಕ್ತವರ್ಣಾಯೈ ನಮಃ |
ಓಂ ಕಲಾನಿಧಯೇ ನಮಃ |
ಓಂ ಮಧುಪ್ರೀಯಾಯೈ ನಮಃ |
ಓಂ ಕಲ್ಯಾಣ್ಯೈ ನಮಃ |
ಓಂ ಕರುಣಾಯೈ ನಮಃ |
ಓಂ ಜನಸ್ಥಾನಾಯೈ ನಮಃ | (60)
ಓಂ ವೀರಪತ್ನ್ಯೈ ನಮಃ |
ಓಂ ವಿರೂಪಾಕ್ಷ್ಯೈ ನಮಃ |
ಓಂ ವೀರಾಧಿತಾಯೈ ನಮಃ |
ಓಂ ಹೇಮಭಾಸಾಯೈ ನಮಃ |
ಓಂ ಸೃಷ್ಟಿರೂಪಾಯೈ ನಮಃ |
ಓಂ ಸೃಷ್ಟಿಸಂಹಾರ ಕಾರಿಣ್ಯೈ ನಮಃ |
ಓಂ ರಂಜನಾಯೈ ನಮಃ |
ಓಂ ಯೌವನಾಕಾರಾಯೈ ನಮಃ |
ಓಂ ಪರಮೇಶಪ್ರಿಯಾಯೈ ನಮಃ |
ಓಂ ಪರಾಯೈ ನಮಃ | (70)
ಓಂ ಪುಷ್ಪಿಣ್ಯೈ ನಮಃ |
ಓಂ ಪುಷ್ಪಾಕಾರಾಯೈ ನಮಃ |
ಓಂ ಪುರುಷಾರ್ಥ ಪ್ರಧಾಯಿನ್ಯೈ ನಮಃ |
ಓಂ ಮಹಾರೂಪಾಯೈ ನಮಃ |
ಓಂ ಮಹಾರೌದ್ರ್ಯೈ ನಮಃ |
ಓಂ ಕಾಮಕ್ಷ್ಯೈ ನಮಃ |
ಓಂ ವಾಮದೇವ್ಯೈ ನಮಃ |
ಓಂ ವರದಾಯೈ ನಮಃ |
ಓಂ ಭಯಾನಾಶಿನ್ಯೈ ನಮಃ |
ಓಂ ವಾಗ್ದೇವ್ಯೈ ನಮಃ | (80)
ಓಂ ವಚನ್ಯೈ ನಮಃ |
ಓಂ ವಾರಾಹ್ಯೈ ನಮಃ |
ಓಂ ವಿಶ್ವತೋಷಿಣ್ಯೈ ನಮಃ |
ಓಂ ವರ್ಧನೀಯಾಯೈ ನಮಃ |
ಓಂ ವಿಶಾಲಾಕ್ಷಾಯೈ ನಮಃ |

ಓಂ ಕುಲಸಂಪತ್ಪ್ರಧಾಯಿನ್ಯೈ ನಮಃ |
ಓಂ ಆರ್ಥದುಃಖಚ್ಛೇದದಕ್ಷಾಯೈ ನಮಃ |
ಓಂ ಅಂಬಾಯೈ ನಮಃ |
ಓಂ ನಿಖಿಲಯೋಗಿನ್ಯೈ ನಮಃ |
ಓಂ ಸಾದಾಪುರಸ್ಥಾಯಿನ್ಯೈ ನಮಃ | (90)
ಓಂ ತರೋರ್ಮೂಲತಲಂಗತಾಯೈ ನಮಃ |
ಓಂ ಹರವಾಹನಸಮಾಯುಕ್ತಯೈ ನಮಃ |
ಓಂ ಮುನಿಮೋಕ್ಷಪಾರಾಯಣಾಯೈ ನಮಃ |
ಓಂ ಧರಾಧರಭವಾಯೈ ನಮಃ |
ಓಂ ಮುಕ್ತಾಯೈ ನಮಃ |
ಓಂ ಪರಮಂತ್ರಾಯೈ ನಮಃ |
ಓಂ ಕರಪ್ರಧಾಯೈ ನಮಃ |
ಓಂ ಕಲ್ಯಾಣ್ಯೈ ನಮಃ |
ಓಂ ವಾಗ್ಭವ್ಯೈ ನಮಃ |
ಓಂ ದೇವ್ಯೈ ನಮಃ | (100)
ಓಂ ಕ್ಲೀಮ್ ಕಾರಿಣ್ಯೈ ನಮಃ |
ಓಂ ಸಂವಿದೇ ನಮಃ |
ಓಂ ಈಶ್ವರ್ಯೈ ನಮಃ |
ಓಂ ಹ್ರೀಂಕಾರ ಬೀಜಾಯೈ ನಮಃ |
ಓಂ ಶಾಂಭವ್ಯೈ ನಮಃ |
ಓಂ ಪ್ರಣವಾತ್ಮಿಕಾಯೈ ನಮಃ |
ಓಂ ಶ್ರೀಮಹಾಗೌರ್ಯೈ ನಮಃ |
ಓಂ ಶುಭಪ್ರಧಾಯೈ ನಮಃ | (108)

|| **ಶ್ರೀ ಪಾರ್ವತೀ ಅಷ್ಟೋತ್ತರ ಶತನಾಮಾವಳಿ:ಸಮಾಪ್ತಂ** ||

*******

# ಶ್ರೀ ಲಿಂಗಾಷ್ಟಕಂ ಸ್ತೋತ್ರಂ

ಬ್ರಹ್ಮಮುರಾರಿ ಸುರಾರ್ಚಿತ ಲಿಂಗಂ
ನಿರ್ಮಲಭಾಸಿತ ಶೋಭಿತ ಲಿಂಗಂ |
ಜನ್ಮಜದುಃಖ ವಿನಾಶಕ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಂ || 1 ||

ದೇವಮುನಿ ಪ್ರವರಾರ್ಚಿತ ಲಿಂಗಂ
ಕಾಮದಹನ ಕರುಣಾಕರ ಲಿಂಗಂ |
ರಾವಣ ದರ್ಪ ವಿನಾಶನ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಂ || 2 ||

ಸರ್ವಸುಗಂಧ ಸುಲೇಪಿತ ಲಿಂಗಂ
ಬುದ್ಧಿವಿವರ್ಧನ ಕಾರಣ ಲಿಂಗಂ |
ಸಿದ್ಧಸುರಾಸುರ ವಂದಿತ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ || 3 ||

ಕನಕಮಹಾಮಣಿ ಭೂಷಿತ ಲಿಂಗಂ
ಫಣಿಪತಿ ವೇಷ್ಟಿತ ಶೋಭಿತ ಲಿಂಗಂ |
ದಕ್ಷಸುಯಜ್ಞ ವಿನಾಶಕ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ || 4 ||

ಕುಂಕುಮಚಂದನ ಲೇಪಿತ ಲಿಂಗಂ
ಪಂಕಜಹಾರ ಸುಶೋಭಿತ ಲಿಂಗಂ |
ಸಂಚಿತ ಪಾಪ ವಿನಾಶಕ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ || 5 ||

ದೇವಗಣಾರ್ಚಿತ ಸೇವಿತ ಲಿಂಗಂ
ಭಾವೈರ್ಭಕ್ತಿಭಿರೇವ ಚ ಲಿಂಗಂ |
ದಿನಕರ ಕೋಟಿ ಪ್ರಭಾಕರ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ || 6 ||

ಅಷ್ಟದಳೋಪರಿವೇಷ್ಟಿತ ಲಿಂಗಂ
ಸರ್ವಸಮುದ್ಭವ ಕಾರಣ ಲಿಂಗಂ |
ಅಷ್ಟದರಿದ್ರ ವಿನಾಶಕ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ || 7 ||

ಸುರಗುರು ಸುರವರ ಪೂಜಿತ ಲಿಂಗಂ
ಸುರವನ ಪುಷ್ಪ ಸದಾರ್ಚಿತ ಲಿಂಗಂ |
ಪರಮಪದಂ ಪರಮಾತ್ಮಕ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ || 8 ||

ಲಿಂಗಾಷ್ಟಕಮಿದಂ ಪುಣ್ಯಂ ಯಃ ಪಠೇತ್ ಶಿವ ಸನ್ನಿಧೌ |
ಶಿವಲೋಕಮವಾಪ್ನೋತಿ ಶಿವೇನ ಸಹ ಮೋದತೇ ||

ಓಂ ತ್ರ್ಯಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ |
ಉರ್ವಾರುಕಮಿವ ಬಂಧನಾತ್ ಮೃತ್ಯೋರ್ಮುಕ್ಷೀಯ ಮಾಮೃತಾತ್ ||
*******

# ಶ್ರೀ ಮಹೇಶ್ವರ ವ್ರತ
## ಪ್ರಥಮ ಅಧ್ಯಾಯ
## **ಶಿವ ಶರ್ಮನ ಕಥೆ**

ಶ್ರೀ ಪರಮೇಶ್ವರನು ಭಕ್ತವತ್ಸಲನು. ಆಶ್ರಿತಜನ ಪಕ್ಷಪಾತಿ. ದಿನದಲ್ಲಿ ಒಂದುಬಾರಿಯಾದರೂ ಭಕ್ತಿಯಿಂದ 'ಓಂ ನಮಃ ಶಿವಾಯ' ಹೇಳಿದರೆ ಸಾಕು, ಸಮಸ್ತ ಶ್ರೇಯಸ್ಸುಗಳೂ ಆಗುತ್ತವೆ. ಆ ಸ್ವಾಮಿಯ ನಾಮವನ್ನು ಪ್ರತಿದಿನ ಸ್ಮರಿಸುವವರಿಗೆ ಸಮಸ್ತ ಐಶ್ವರ್ಯಗಳು ಲಭಿಸುತ್ತದೆ. ಯಾವುದೇ ಅಪಾಯ ಹತ್ತಿರ ಸುಳಿಯುವುದಿಲ್ಲ. ಅಪಮೃತ್ಯು ಭಯವು ಇರುವುದಿಲ್ಲ. ಭಕ್ತಜನ ಸುಲಭನಾದ ಆ ಶ್ರೀ ಮಹೇಶ್ವರನು 'ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ' ಎಂಬ ಭಕ್ತನಿಗೆ ಈ ವ್ರತವನ್ನು ಅನುಗ್ರಹಿಸಿದನು. ಈ ವ್ರತವನ್ನು ನಿರ್ಮಲ ಮನಸ್ಸಿನಿಂದ, ಸ್ವಾಮಿಯನ್ನೇ ಸ್ಮರಿಸುತ್ತಾ ಆಚರಿಸಿದವರಿಗೆ ಶ್ರೀ ಪರಮೇಶ್ವರನ ಅನುಗ್ರಹವೂ ಉಂಟಾಗುತ್ತದೆ. ಸಕಲ ಸೌಭಾಗ್ಯಗಳು ಉಂಟಾಗುತ್ತದೆ.

ಪೂರ್ವಕಾಲದಲ್ಲಿ ಕಾವೇರಿ ನದಿತೀರದಲ್ಲಿ ಶಿವ ಶರ್ಮನೆಂಬ ಶ್ರೀ ಪರಮೇಶ್ವರನ ಮಹಾಭಕ್ತನು ಇರುತ್ತಿದ್ದನು. ಅವನು ಅನೇಕ ಶಾಸ್ತ್ರಗಳಲ್ಲಿ ಬಹಳ ಪ್ರಾವೀಣ್ಯತೆಯನ್ನು ಸಂಪಾದಿಸಿದವನಾಗಿ, ಅಕ್ಕಪಕ್ಕದ ಗ್ರಾಮಗಳಲ್ಲಿ ತನ್ನನ್ನು ಮೀರಿದ ಪಂಡಿತನು ಇಲ್ಲವೆಂದು ಹೆಸರು ಪಡೆದುಕೊಂಡಿದ್ದನು. ಮುಖ್ಯವಾಗಿ ಜ್ಯೋತಿಷ್ಯ, ವ್ಯಾಕರಣ ಶಾಸ್ತ್ರಗಳಲ್ಲಿ ತುಂಬಾ ಹೆಸರುಪಡೆದು ಪ್ರಸಿದ್ಧಿ ಹೊಂದಿದನು. ಆ ಶಿವ ಶರ್ಮ – ಸುಮತಿ ದಂಪತಿಗಳಿಗೆ ಇಬ್ಬರು ಹೆಣ್ಣುಮಕ್ಕಳು. ಇಬ್ಬರಿಗೂ ಉತ್ತಮ ವರನೊಂದಿಗೆ ವಿವಾಹವಾಗಿತ್ತು. ಇದೆಲ್ಲವನ್ನು ಆ ಶ್ರೀ ಪರಮೇಶ್ವರನ ಅನುಗ್ರಹವೆಂದು ತಿಳಿಯುತ್ತಿದ್ದನು. ಭಾರ್ಯೆ ಸುಮತಿಯು ಕೂಡಾ ಪತಿಗೆ ತಕ್ಕ ಪತ್ನಿಯಾಗಿದ್ದಳು.

ಪ್ರತಿ ಏಕಾದಶಿದಿನ ಶಿವ ಶರ್ಮನು ಏಕಾದಶ ರುದ್ರಾಭಿಷೇಕವನ್ನು ಮಾಡುತ್ತಿದ್ದನು. ಆ ದಿನ ಮನೆಗೆ ಬಂದ ಬಂಧುಮಿತ್ರರಿಗೆ ಆ ದಂಪತಿಗಳು ಊಟ ಬಡಿಸದೇ ಕಳಿಸುತ್ತಿರಲಿಲ್ಲ. ಪ್ರತಿಕ್ಷಣವೂ ಶಿವ ಶರ್ಮ ದಂಪತಿಗಳು ಆ ಪರಮೇಶ್ವರನನ್ನೇ ಸ್ಮರಿಸುತ್ತಾ ಕಾಲವನ್ನು ಕಳೆಯುತ್ತಿದ್ದರು. ಇಷ್ಟರಲ್ಲಿ ಒಮ್ಮೆ ಶಿವ ಶರ್ಮನಿಗೆ ಯಾವುದೋ ಕಣ್ಣಿನ ರೋಗ ಬಂದು, ದೃಷ್ಟಿ ಸರಿಯಾಗಿ ಕಾಣುತ್ತಿರಲಿಲ್ಲ. ಎಷ್ಟು ರೀತಿಯ ಮದ್ದುಗಳನ್ನು ಮಾಡಿದರೂ ಯಾವುದೇ ಫಲಿತವಿಲ್ಲದೆ ಹೋಯಿತು. ದಿನದಿನಕ್ಕೆ ಕಣ್ಣಿನ ದೃಷ್ಟಿಯು ಮಂದವಾಗತೊಡಗಿತು. ದೃಷ್ಟಿಯು ಮಂದವಾಗಿ ಕಣ್ಣು ಸರಿಯಾಗಿ ಕಾಣಿಸದೆ, ಒಂದುದಿನ ಕಾಲಿಗೆ ಯಾವುದೋ ವಸ್ತುವು ತಾಗಿ ಬಿದ್ದುದರಿಂದ ಮೊಣಕಾಲು ಮುರಿದು, ಎರಡು ತಿಂಗಳು ಮಂಚದ ಮೇಲೆಯೇ ಇರುವ ಪರಿಸ್ಥಿತಿ ಉಂಟಾಯಿತು.

ಯಾವಾಗಲೂ ಆ ಪರಮೇಶ್ವರನನ್ನೇ ಸ್ಮರಿಸುವ ತಮಗೆ ಇಷ್ಟು ಕಷ್ಟಗಳು ಯಾಗಾಗಿ ಬಂತೋ ಎಂದು ಆ ದಂಪತಿಗಳು ಬಹಳ ಕುಗ್ಗಿಹೋದರು. ತಂದೇ ಪರಮೇಶ್ವರ! ಏನೀ ಪ್ರಾರಬ್ಧಕರ್ಮ? ಯಾಕೆ ನಮಗೆ ಇಷ್ಟು ನೋವೆಂದು ಪದೇ ಪದೇ ದೈನ್ಯದಿಂದ ಪಾರ್ಥಿಸುತ್ತಿದ್ದರು. ಎಂಥಹ ವ್ಯಕ್ತಿಯಾದರೂ ಪೂರ್ವಜನ್ಮದ ಪಾಪದ ಫಲವನ್ನು ಅನುಭವಿಸದೇ ತಪ್ಪದು ಅಲ್ವಾ! ಆದರೆ, ಪರಮೇಶ್ವರನು ದಯಾಮಯನು. ಶಿವ ಶರ್ಮನ ಪಾಪದ ಫಲವು ನಶಿಸಿದ್ದರಿಂದ, ಇನ್ನು ತನ್ನ ಭಕ್ತನನ್ನು ರಕ್ಷಿಸಬೇಕೆಂದು ನಿರ್ಣಯಿಸಿದನು. ಮರುದಿನ ಮುಂಜಾನೆ ಅವರ ಮನೆಗೆ ಸಾಕ್ಷಾತ್

ಆ ಪರಮೇಶ್ವರನೇ ಒಬ್ಬ ವೃದ್ಧ ಬ್ರಾಹ್ಮಣನ ರೂಪದಲ್ಲಿ ಬಂದನು. ಶಿವ ಶರ್ಮ ದಂಪತಿಗಳಿಗೆ ಆ ಬ್ರಾಹ್ಮಣನಲ್ಲಿ ಯಾವುದೋ ದಿವ್ಯತೇಜಸ್ಸು ಕಾಣಿಸಿತು. ಆ ದಂಪತಿಗಳಿಬ್ಬರೂ ಆ ಬ್ರಾಹ್ಮಣನಿಗೆ ನಮಸ್ಕರಿಸಿ ಹೀಗೆ ಹೇಳಿದರು. 'ಸ್ವಾಮೀ! ನೀವು ದಿವ್ಯ ತಪಃಸಂಪನ್ನರ ಹಾಗೆ ಇದ್ದೀರಿ. ನಮ್ಮಲ್ಲಿ ದಯೆ ತೋರಿ ಈ ಕಷ್ಟಗಳಿಂದ ವಿಮುಕ್ತಿ ಪಡೆಯುವ ಮಾರ್ಗವನ್ನು ತಿಳಿಸಿರಿ' ಎಂದು ಪಾರ್ಥಿಸಿದರು.

ಆಗ ವೃದ್ಧ ಬ್ರಾಹ್ಮಣನ ರೂಪದಲ್ಲಿರುವ ಪರಮೇಶ್ವರನು ಹೀಗೆ ಹೇಳಿದನು. 'ಮಕ್ಕಳೇ! ನಿಮ್ಮ ನೋವನ್ನು ನಾನು ಅರಿತೆನು. ನಿಮ್ಮ ತೊಂದರೆಗಳೆಲ್ಲವನ್ನು ಪರಿಹರಿಸುವ ಉಪಾಯವನ್ನು ಹೇಳುತ್ತೇನೆ. ಇಲ್ಲಿಂದ ಒಂದುರಾತ್ರಿ ಪ್ರಯಾಣದ ದೂರದಲ್ಲಿ 'ಶಿವಗಿರಿ' ಎನ್ನುವ ಬೆಟ್ಟವಿದೆ. ಆ ಬೆಟ್ಟದೆ ಮೇಲೆ ಬೆಳಗಿದ ಪರಮೇಶ್ವರನು ಮಹಾಶಕ್ತಿಸಂಪನ್ನನು. ನೀವು ಶೀಘ್ರದಲ್ಲೇ ಹೊರಟು ಆ ಸ್ವಾಮಿಯನ್ನು ದರ್ಶಿಸಿರಿ. ಆ ಸ್ವಾಮಿಯ ದಿವ್ಯದರ್ಶನದಿಂದ ನಿಮ್ಮ ತೊಂದರೆಗಳೆಲ್ಲಾ ತಕ್ಷಣ ನಿವಾರಣೆಯಾಗುತ್ತದೆ' ಎಂದು ತಿಳಿಸಿದನು.

ಶಿವ ಶರ್ಮನು ಭಾರ್ಯೆಯೊಟ್ಟಿಗೆ ಮರುವಾರದಲ್ಲಿಯೇ ಹೊರಟು ಶಿವಗಿರಿ ಪ್ರಾಂತ್ಯವನ್ನು ಮುಟ್ಟಿದನು. ಬೆಟ್ಟದ ಮೇಲಿನ ಮೆಟ್ಟಿಲುಗಳು ಸರಿಯಾಗಿಲ್ಲ. ಬೆಟ್ಟ ಕೂಡಾ ಸ್ವಲ್ಪ ಎತ್ತರದಲ್ಲೇ ಇದೆ. ದೃಷ್ಟಿ ಸರಿಯಾಗಿ ಕಾಣದೇ, ಈ ಕಾಲುನೋವಿನಿಂದ ನಿಜವಾಗಿ ಬೆಟ್ಟ ಹತ್ತಲಾಗುವುದೋ ಎಂದು ಶಿವ ಶರ್ಮನಿಗೆ ಸಂದೇಹ ಉಂಟಾಯಿತು. ಬೆಟ್ಟದ ಮೇಲಿಂದ ಕೆಳಗಿಳಿಯುತ್ತಿರುವ ಭಕ್ತರನ್ನು, ಎಷ್ಟು ಮೆಟ್ಟಿಲುಗಳಿವೆ ಎಂದು ಕೇಳಿದನು. ಅವರು ಶಿವ ಶರ್ಮ ದಂಪತಿಗಳಿಗೆ ಬಹುತೇಕ ಸಾವಿರ ಮೆಟ್ಟಿಲುಗಳಿವೆ ಎಂದು, ಎರಡು ಗಂಟೆಗ್ಗಿಂತ ಜಾಸ್ತಿ ಸಮಯವಾಗುತ್ತದೆಂದು ಹೇಳಿದರು. ಅದನ್ನು ಕೇಳಿ, ಶಿವ ಶರ್ಮನಿಗೆ ತುಂಬಾ ನೋವಾಯಿತು. ಈ ಕಾಲುನೋವಿನಿಂದ ಹೇಗೆ ಹತ್ತಲಿ ಎಂದು ಆಲೋಚಿಸಿದನು. ಆದರೆ ಮನಸ್ಸಿನಲ್ಲಿ ಆ ವೃದ್ಧ ಬ್ರಾಹ್ಮಣನೇ ಕಾಣಿಸುತ್ತಿದ್ದಾನೆ. ಹೇಗಾದರೂ ಹತ್ತಬೇಕೆಂದು ನಿಶ್ಚಯಿಸಿ, ನಿಧಾನವಾಗಿ ಪತ್ನಿಯನ್ನು ಆಸರೆಯಾಗಿ ಹಿಡಿದುಕೊಂಡು ಆಯಾಸದಿಂದ ಬೆಟ್ಟವನ್ನು ಹತ್ತತೊಡಗಿದನು. ಮೆಟ್ಟಿಲುಗಳು ತುಂಬಾ ಕಡಿದಾದವುಗಳಾಗಿದ್ದು ಹತ್ತಲು ಕಷ್ಟವಾಗಿತ್ತು.

ಶಿವ ಶರ್ಮನು ಪ್ರತಿ ಹತ್ತು ಮೆಟ್ಟಿಲುಗಳಿಗೆ ಒಂದುಸಾರಿ ಕೂತುಕೊಳ್ಳತೊಡಗಿದನು. ಹಾಗೆ ಇನ್ನೂರು ಮೆಟ್ಟಿಲುಗಳನ್ನು ಹತ್ತುವಾಗ, ಅವನಲ್ಲಿದ್ದ ಉತ್ಸಾಹ, ಶಕ್ತಿ ಪೂರ್ತಿ ಕಡಿಮೆಯಾಯಿತು. ಇನ್ನು ಮುಂದೆ ಹೋಗಲಾರೆನೆಂದು ಇದ್ದಲ್ಲಿಯೇ ಕುಳಿತುಕೊಂಡನು. ಆಗ ಮೆಟ್ಟಿಲುಗಳನ್ನು ಹತ್ತುತ್ತಿರುವ ಭಕ್ತನೊಬ್ಬನು ಇವರ ಹತ್ತಿರ ಬಂದು, 'ಸ್ವಾಮೀ, ನನ್ನೊಟ್ಟಿಗೆ ಬನ್ನಿ. ನೀವು ಸುಲಭವಾಗಿ ಮೆಟ್ಟಿಲುಗಳನ್ನು ಹತ್ತುತ್ತೀರಿ' ಎಂದು ಹೇಳಿ ಶಿವ ಶರ್ಮನ ಕೈಹಿಡಿದುಕೊಂಡು ಎಬ್ಬಿಸಿದನು. ಶಿವ ಶರ್ಮನಿಗೆ ಆ ಭಕ್ತನ ಕೈತಗುಲಿದ ಕೂಡಲೇ ಒಮ್ಮೆಲೇ ಶರೀರಕ್ಕೆಲ್ಲಾ ಯಾವುದೋ ವಿದ್ಯುತ್ ಪ್ರಸರಿಸಿದ ಹಾಗಾಯಿತು. ಅಷ್ಟೇ! ಅವನ ಕೈ ಹಿಡಿದುಕೊಂಡು ಶಿವ ಶರ್ಮನು ಸಾವಿರ ಮೆಟ್ಟಿಲುಗಳನ್ನು ಚಕಚಕನೇ ಹತ್ತಿದನು. ಬೆಟ್ಟದ ಮೇಲೆ ಬಂದಾಗ, ಸ್ವಲ್ಪ ದೂರದಲ್ಲಿರುವ ಪರಮೇಶ್ವರನ ದೇವಾಲಯವು ಅದ್ಭುತವಾಗಿ ದರ್ಶನಕೊಟ್ಟಿತು. ಶಿವ ಶರ್ಮ ದಂಪತಿಗಳಿಬ್ಬರೂ ಕಣ್ಣುಗಳನ್ನು ಮುಚ್ಚಿಕೊಂಡು ದೇವಾಯಲದ ಕಡೆಗೆ ತಿರುಗಿ ಆ ಸ್ವಾಮಿಗೆ ನಮಸ್ಕರಿಸಿದರು. ಅಷ್ಟೇ! ಆಶ್ಚರ್ಯ! ಕಣ್ಣುಗಳನ್ನು ತೆರೆದಾಗ ಶಿವ ಶರ್ಮನ ಕಣ್ಣಿನ ರೋಗವು ಪೂರ್ತಿಯಾಗಿ ವಾಸಿಯಾಗಿತ್ತು. ಕಣ್ಣಿನ ದೃಷ್ಟಿಯು ಹಿಂದಿನಕ್ಕಿಂತಲೂ ಉತ್ತಮವಾದಂತೆ ಅನಿಸಿತು. ಬಹಳ ಸಂತೋಷಪಡುತ್ತಾ

ದಂಪತಿಗಳಿಬ್ಬರೂ ಆ ಪರಮೇಶ್ವರನನ್ನು ಅನೇಕ ವಿಧಗಳಿಂದ ಸ್ತುತಿಸಿದರು. ಶಿವ ಶರ್ಮನು ಅಲ್ಲಿಯವರೆಗೂ ತನ್ನ ಕೈಹಿಡಿದು ಕರೆದುಕೊಂಡು ಬಂದ ಭಕ್ತನಿಗಾಗಿ ಪಕ್ಕಕ್ಕೆ ತಿರುಗಿ ನೋಡಿದನು. ಆದರೆ ಎಲ್ಲಿಯೂ ಕಾಣಿಸಲಿಲ್ಲ. ಆಗ ಅವರಿಗೆ ಅರ್ಥವಾಯಿತು. ಆ ಪರಮೇಶ್ವರನೇ ಆ ಭಕ್ತನ ರೂಪದಲ್ಲಿ ಬಂದು ತಮ್ಮನ್ನು ಅನುಗ್ರಹಿಸಿದನೆಂದು ಶಿವ ಶರ್ಮ ದಂಪತಿಗಳಿಗೆ ತಿಳಿಯಿತು.

ಆ ದಂಪತಿಗಳಿಬ್ಬರೂ ಬೆಟ್ಟದ ಮೇಲಿರುವ ಸರೋವರದಲ್ಲಿ ಸ್ನಾನ ಮಾಡಿ, ದೇವಾಲಯದಲ್ಲಿ ಶ್ರೀ ಪರಮೇಶ್ವರನ ದರ್ಶನವನ್ನು ಮಾಡಿದರು. ಶ್ರೀ ಪರಮೇಶ್ವರನ ದರ್ಶನದಿಂದ ಅವರ ಪೂರ್ವಜನ್ಮ ಪಾಪಗಳೆಲ್ಲಾ ನಶಿಸಿದುವು. ಆ ರಾತ್ರಿಯನ್ನುಅಲ್ಲೇ ಕಳೆದು, ಮರುದಿನ ಅವರ ಊರಿಗೆ ತಿರುಗಿ ಹೊರಟು ಹೋದರು. ಕೆಲವು ದಿನಗಳಲ್ಲೇ ಶಿವ ಶರ್ಮನ ಕಾಲುನೋವು ಕೂಡಾ ಪೂರ್ತಿ ಕಡಿಮೆಯಾಯಿತು. ಶಿವ ಶರ್ಮ ದಂಪತಿಗಳು ಬದುಕಿದಷ್ಟು ದಿನ ಆ ಪರಮೇಶ್ವರನ ಸೇವೆಯನ್ನು ಮಾಡುತ್ತಾ ಬಹಳ ಭಾಗ್ಯವಂತರಾಗಿ ಬಹುಕಾಲ ಅನೇಕ ಭೋಗಗಳನ್ನು ಅನುಭವಿಸುತ್ತಾ, ಕೊನೆಗೆ ಮುಕ್ತಿಯನ್ನು  ಪಡೆದರು.

ಪ್ರಥಮ ಅಧ್ಯಾಯವು ಸಂಪೂರ್ಣವಾಯಿತು

|| ಓಂ ನಮಃ ಪಾರ್ವತೀ ಪತಯೇ ನಮಃ ||

|| ಓಂ ಹರ ಹರ ಮಹಾದೇವಾಯ ನಮಃ ||

*******

ಎರಡನೇ ಅಧ್ಯಾಯ

## ಶಂಕರ ಭಟ್ಟನ ಕಥೆ

ಸೃಷ್ಟಿಗೆಲ್ಲಾ ಕಾರಣೀಭೂತನು ಶ್ರೀ ಪರಮೇಶ್ವರನು. ಸಮಸ್ತ ದೇವತಾಗಣಗಳು ಆ ಪರಮೇಶ್ವರನನ್ನು ನಿತ್ಯವೂ ಸ್ತುತಿಸುತ್ತಿರುತ್ತಾರೆ. ದಿನದಲ್ಲಿ ಒಮ್ಮೆಯಾದರೂ ಆ ಶ್ರೀ ಪರಮೇಶ್ವರನ ನಾಮವನ್ನು ನೆನೆದರೆ ಎಷ್ಟೋ ಜನ್ಮಗಳ ಪಾಪಗಳು ನಶಿಸುತ್ತವೆ. ಅದರಲ್ಲೂ ಸಂಧ್ಯಾ ಸಮಯದಲ್ಲಿ ಶಿವನ ನಾಮಸ್ಮರಣೆ ಮಾಡಿದವರಿಗೆ ಬಹಳ ಪುಣ್ಯಫಲವು ಉಂಟಾಗುತ್ತದೆ. ಈ ಸೃಷ್ಟಿಯನ್ನೆಲ್ಲಾ ವ್ಯಾಪಿಸಿರುವ ಆ ಶ್ರೀ ಪರಮೇಶ್ವರನನ್ನು ನಿತ್ಯ ಪ್ರಾರ್ಥಿಸುತ್ತಿರುವವರಿಗೆ ಸಮಸ್ತ ಶ್ರೇಯಸ್ಸುಗಳು ಉಂಟಾಗುತ್ತದೆ. ಸಮಸ್ತ ಐಶ್ವರ್ಯಗಳು ಲಭಿಸುತ್ತವೆ. ಯಾವುದೇ ಅನಾರೋಗ್ಯವು ಹತ್ತಿರ ಸುಳಿಯುವುದಿಲ್ಲ. ಬದುಕಿದಷ್ಟು ದಿನ ಸುಖವಾಗಿ ಜೀವಿಸಿ, ಕೊನೆಗೆ ಮುಕ್ತಿಯನ್ನು ಹೊಂದುತ್ತಾರೆ.

ಪೂರ್ವಕಾಲದಲ್ಲಿ ಕೃಷ್ಣಾ ನದಿತೀರದಲ್ಲಿ ಶಂಕರ ಭಟ್ಟನೆಂಬ ಬ್ರಾಹ್ಮಣನು ಇರುತ್ತಿದ್ದನು. ತನ್ನ ಊರಲ್ಲಿರುವ ವೇದ ಪಾಠಶಾಲೆಯಲ್ಲಿ ಪೌರೋಹಿತ್ಯ ವಿದ್ಯೆಯನ್ನು ಕಲಿತುಕೊಂಡು ಸುತ್ತುಮುತ್ತಲ್ಲಿರುವ ಗ್ರಾಮಗಳಲ್ಲಿ ಪೌರೋಹಿತ್ಯ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದನು. ಬಹಳ ಸತ್ಪ್ರವರ್ತನೆಯಿಂದ ಜೀವಿಸುತ್ತಿದ್ದನು. ಭಾರ್ಯೆ, ಇಬ್ಬರು ಗಂಡುಮಕ್ಕಳೊಂದಿಗೆ ಸುಖವಾಗಿದ್ದನು. ನಿತ್ಯ ಆ ಭಗವಂತನ ನಾಮಸ್ಮರಣೆಯೊಂದಿಗೆ ಕಾಲವನ್ನು ಕಳೆಯುತ್ತಿದ್ದನು. ಪೌರೋಹಿತ್ಯದಲ್ಲಿ ಒಳ್ಳೆಯ ಹೆಸರು ಬಂದಿದ್ದರಿಂದ, ಸಂಪಾದನೆ ಕೂಡಾ ತುಂಬಾನೇ ಹೆಚ್ಚಾಗತೊಡಗಿತು. ಇಷ್ಟರಲ್ಲಿ ಅವನಿಗೆ ಐವತ್ತು ಸಂವತ್ಸರ ವಯಸ್ಸಾಯಿತು. ತುಂಬಾ ಹಣ

ಸಂಪಾದನೆಯಿಂದ, ಅವನಲ್ಲಿ ಅಹಂಕಾರ ಹೆಚ್ಚಾಯಿತು. ಅದರಿಂದ ದೈವಭಕ್ತಿ ಕುಗ್ಗಿತು. ಅನೇಕ ಕೆಟ್ಟ ಅಭ್ಯಾಸಗಳಿಗೆ ತುತ್ತಾದನು. ಒಂದುಕಾಲದಲ್ಲಿ ಬಹಳ ಹೆಸರುಳ್ಳ ಶಂಕರ ಭಟ್ಟನು ಕೆಟ್ಟ ವ್ಯಸನಗಳ ಅಪ್ಪುಗೆಯಿಂದ, ಕೊನೆಗೆ ಹೆಂಡತಿ, ಮಕ್ಕಳಿಂದ ಕೂಡ ಅಸಹ್ಯಪಡುವ ಪರಿಸ್ಥಿತಿಗೆ ಬಂದನು. ಇದ್ದ ಕೆಟ್ಟ ವ್ಯಸನದೊಟ್ಟಿಗೆ ಪರಸ್ತ್ರೀ ವ್ಯಾಮೋಹ ಕೂಡಾ ಜಾಸ್ತಿಯಾದುದರಿಂದ, ಊರವರೆಲ್ಲರೂ ಸೇರಿ ಅವನಿಗೆ ಗ್ರಾಮ ಬಹಿಷ್ಕರಣ ಶಿಕ್ಷೆಯನ್ನು ವಿಧಿಸಿದರು.

ಊರಿಂದ ಬಹಿಷ್ಕರಿಸಲ್ಪಟ್ಟ ಶಂಕರ ಭಟ್ಟನು ಆ ಊರು, ಈ ಊರು ತಿರುಗುತ್ತಾ ಅನಾರೋಗ್ಯದ ಪಾಲಾಗಿ, ಭಿಕ್ಷೆಯನ್ನು ಬೇಡುತ್ತಾ ಜೀವಿಸತೊಡಗಿದನು. ಹಾಗೆ ಒಂದೊಂದು ಊರಲ್ಲಿ ಕೆಲವು ದಿನಗಳನ್ನು ಕಳೆಯುತ್ತಾ, ಮತ್ತೆ ಸ್ವಲ್ಪ ದಿನಗಳಲ್ಲಿ ಬೇರೆ ಊರನ್ನು ಸೇರುತ್ತಿದ್ದನು. ಒಂದುದಿನ ಇದ್ದ ಊರಿನಿಂದ ಹೊರಟು ಸಾಗುತ್ತಾ ಮಧ್ಯದಲ್ಲಿ ಅರಣ್ಯಮಾರ್ಗದಲ್ಲಿ ಸಿಕ್ಕಿಬಿದ್ದನು. ಎಲ್ಲಿ ನೋಡಿದರೂ ಕಗ್ಗತ್ತಲೆ. ದಾರಿ ಕಾಣದೇ ಗೊಂದಲಕ್ಕೊಳಗಾದನು. ಒಂದು ಮರದ ಕೆಳಗೆ ನಿದ್ರೆಹೋದನು. ರಾತ್ರೆಲ್ಲಾ ಕಾಡು ಪ್ರಾಣಿಗಳ ಕಿರುಚಾಟದಿಂದ ಸರಿಯಾಗಿ ನಿದ್ರೆಮಾಡಲಾಗಲಿಲ್ಲ. ಮುಂಜಾನೆದ್ದ ಕೂಡಲೇ ಪುನಃ ನಡಿಗೆ ಪ್ರಾರಂಭಿಸಿದನು. ಆಯಾಸವಾಗಿರುವುದರಿಂದ ಹೆಚ್ಚು ದೂರ ನಡೆಯಲಾರದಾದನು. ಇಷ್ಟರಲ್ಲಿ ಸಾಯಂಕಾಲವಾಗಿ ಕತ್ತಲೆಯಾಯಿತು. ದೇಹದಲ್ಲಿ ಉತ್ಸಾಹ, ತಾಳ್ಮೆ ನಶಿಸಿ, ಇನ್ನು ಮರಣವು ತಪ್ಪದೆಂದು ಭಾವಿಸಿದನು.

ಆಗ ಶಂಕರ ಭಟ್ಟನಿಗೆ ಒಂದು ಹಳೆಯ ಕಟ್ಟಡವು ಕಾಣಿಸಿತು. ಆ ಕಟ್ಟಡವೆಲ್ಲಾ ಹಾಳುಬಿದ್ದು ಶಿಥಿಲಾವಸ್ಥೆಯಲ್ಲಿದೆ. ಅದರಲ್ಲಿ ಅನೇಕ ಚಿಕ್ಕ ಚಿಕ್ಕ ಕೋಣೆಗಳು ಇದ್ದಹಾಗೆ ಕಾಣಬಂತು. ನೆಮ್ಮದಿಯಾಗಿ ಒಂದು ಕೋಣೆಯೊಳಗೆ ಪ್ರವೇಶಿಸಿದನು. ಆ ರಾತ್ರಿಯಲ್ಲಿ ಅಲ್ಲೇ ಮಲಗಬಹುದೆಂದು ಭಾವಿಸಿದನು. ಎಲ್ಲಾ ಧೂಳಿನಿಂದ ತುಂಬಿಕೊಂಡಿದೆ. ಕಾಲಿಗೆ ಎಷ್ಟೋ ಮುಳ್ಳುಗಳು, ಎಲೆಗಳು ತಗುಲುತ್ತಿವೆ. ಅಲ್ಲಿ ನಿದ್ರೆಮಾಡುವುದಕ್ಕೋಸ್ಕರ ಆ ಸ್ಥಳವನ್ನೆಲ್ಲಾ ಶುಭ್ರಮಾಡಿಕೊಂಡನು. ಕತ್ತಲೆಯಲ್ಲಿ ಕಾಲಿಗೆ ತಗಲುತ್ತಿದ್ದ ಎಲೆಗಳನ್ನು ಪಕ್ಕಕ್ಕೆ ಬಿಸಾಡಿದನು. ಎಲ್ಲಾಕಡೆ ಗಾಡಾಂಧಕಾರ. ಆ ಕಟ್ಟಡವು ಏನೆಂದು ಕೂಡಾ ತಿಳಿಯಲಿಲ್ಲ.

ನಿದ್ರೆಮಾಡುವ ಎಂದು ಎಷ್ಟು ಪ್ರಯತ್ನಿಸಿದರೂ ಶರೀರದಲ್ಲಿ ಉತ್ಸಾಹ ನಶಿಸಿ ನಿದ್ರೆ ಕೂಡಾ ಬರಲಿಲ್ಲ. ಇಷ್ಟರಲ್ಲಿ ಬೆಳಗಾಯಿತು. ಅವನ ಎದುರಲ್ಲಿ ಒಮ್ಮೆಲೇ ಸಾಕ್ಷಾತ್ ಶ್ರೀ ಪರಮೇಶ್ವರನು ಪ್ರತ್ಯಕ್ಷನಾದನು. ಶಂಕರ ಭಟ್ಟನಿಗೆ ಹೀಗೆ ಹೇಳಿದನು. 'ಮಗನೇ! ಶಂಕರ ಭಟ್ಟ, ನೀನು ಇದಕ್ಕೆ ಮೊದಲು ತುಂಬಾ ಪಾಪಗಳನ್ನು ಮಾಡಿದ್ದೀ. ಆದರೆ, ನಿನ್ನೆ ರಾತ್ರಿ ಗೊತ್ತಿಲ್ಲದೇ ಮಾಡಿದ ನಿನ್ನ ಕೆಲಸದಿಂದ ನಾನು ಬಹಳ ಪ್ರಸನ್ನನಾಗಿದ್ದೇನೆ. ನಿನ್ನೆ ನನಗೆ ಅತ್ಯಂತ ಪ್ರೀತಿಪಾತ್ರವಾದ ಮಹಾಶಿವರಾತ್ರಿಯ ಪರ್ವದಿನ. ನೀನು ಕಾಲಿಟ್ಟ ಈ ಪ್ರದೇಶವು 'ಮಹೇಶ್ವರಂ' ಎಂಬ ಹೆಸರಿನಿಂದ ಒಂದುಕಾಲದಲ್ಲಿ ಬಹಳ ವಿರಾಜಿಸುತ್ತಿತ್ತು. ಇಷ್ಟು ಸಮಯ ಎಲ್ಲರೂ ನಿರ್ಲಕ್ಷಿಸಿದ್ದರಿಂದ ಹೀಗೆ ಶಿಥಿಲಾವಸ್ಥೆಯಲ್ಲಿದೆ. ಇಷ್ಟು ಸಂವತ್ಸರಗಳ ನಂತರ ನೀನು ಇದನ್ನು ಶುಭ್ರಮಾಡುವ ಪ್ರಯತ್ನವನ್ನು ಮಾಡಿದ್ದಿ. ಅಷ್ಟೇಅಲ್ಲ, ಎಷ್ಟೋ ಕಾಲದಿಂದ ಕೆಳಗೆ ಬಿದ್ದಿರುವ ಬಿಲ್ವಪತ್ರೆಗಳನ್ನು ನಿನಗೆ ತಿಳಿಯದೇ ಒಂದು ಪಕ್ಕದಲ್ಲಿರುವ ನನ್ನ ಶಿವಲಿಂಗದ ಮೇಲೆ ಎಸೆದಿದ್ದೀ. ಮಹಾಶಿವರಾತ್ರಿಯ ದಿನ ಉಪವಾಸವಿದ್ದು, ನನ್ನ ದೇವಾಲಯವನ್ನು ಶುಭ್ರಮಾಡಿ, ಬಿಲ್ವಪತ್ರೆಗಳಿಂದ ನನ್ನನ್ನು ಅರ್ಚಿಸಿದ ಭಾಗ್ಯವೂ ನಿನಗೆ ಸಿಕ್ಕಿದೆ. ಈ ಕ್ಷಣದಿಂದ

ಸಕಲ ಸಂಪತ್ತುಗಳನ್ನು ನಿನಗೆ ಪ್ರಸಾದಿಸುತ್ತಿದ್ದೇನೆ. ಒಂದುಸಾರಿ ಕಣ್ಣುಮುಚ್ಚಿ ನನ್ನನ್ನು ಪ್ರಾರ್ಥಿಸು' ಎಂದು ಈಶ್ವರನು ಅದೃಶ್ಯನಾದನು. ಕಣ್ಣುಗಳನ್ನು ತೆರೆದ ಶಂಕರ ಭಟ್ಟನು ತನ್ನ ಗ್ರಾಮದಲ್ಲಿದ್ದನು. ಇದೆಲ್ಲಾ ಆ ಶ್ರೀ ಪರಮೇಶ್ವರನ ಮಹಿಮೆಯೆಂದು ತಿಳಿದನು. ಯಾವುದೇ ಅನಾರೋಗ್ಯವೂ ಇಲ್ಲ, ತುಂಬಾ ಐಶ್ವರ್ಯವು ದೊರಕಿದೆ. ಜರುಗಿದ ವಿಷಯವನ್ನೆಲ್ಲಾ ಹೆಂಡತಿ, ಮಕ್ಕಳು ಮತ್ತು ಊರವರಿಗೆಲ್ಲಾ ಹೇಳಿದನು. ಆನಂತರ, ಶಂಕರ ಭಟ್ಟನು ಯಾವುದೇ ದುರ್ವ್ಯಸನಗಳಿಗೆ ಒಳಗಾಗದೇ, ಅನೇಕ ಸತ್ಕಾರ್ಯಗಳನ್ನು ಮಾಡುತ್ತಾ ಆ ಶ್ರೀ ಪರಮೇಶ್ವರನ ಸೇವೆಯಲ್ಲಿ ಕಾಲವನ್ನು ಕಳೆಯುತ್ತಾ ಕೊನೆಗೆ ಆ ಶ್ರೀ ಪರಮೇಶ್ವರನಲ್ಲಿ ಐಕ್ಯವಾದನು.

ಶ್ರೀ ಪರಮೇಶ್ವರನು ತುಂಬಾ ದಯಾಮಯನು. ತಿಳಿಯದೇ ತನ್ನನ್ನು ಪೂಜಿಸಿದ ಶಂಕರ ಭಟ್ಟನನ್ನು ಬಹಳ ಅನುಗ್ರಹಿಸಿದನು. ಇನ್ನು ತಿಳಿದು ಮಾಡುವ ಶಿವಪೂಜೆಯಿಂದ ಎಂಥಹ ಪುಣ್ಯಫಲವು ಲಭಿಸುತ್ತದೋ ಊಹಿಸಲು ಸಾಧ್ಯವಿಲ್ಲ. ಶ್ರೀ ಪರಮೇಶ್ವರನು ಅಲ್ಪ ಸಂತೋಷಿಯು. ಒಂದುಸಾರಿ ತನ್ನ ನಾಮವನ್ನು ಸ್ಮರಿಸಿದರೂ, ಸಮಸ್ತ ಐಶ್ವರ್ಯಗಳನ್ನು ಅನುಗ್ರಹಿಸುತ್ತಾನೆ. ಮಂಗಳಕರನು, ಶುಭಪ್ರದನು, ಮುಕ್ತಿಪ್ರದಾತನಾದ ಶ್ರೀ ಪರಮೇಶ್ವರನಿಗೆ ಇವೇ ನಮ್ಮ ನಮಸ್ಕಾರಗಳು.

ಎರಡನೇ ಅಧ್ಯಾಯವು ಸಂಪೂರ್ಣವಾಯಿತು

|| ಓಂ ನಮಃ ಪಾರ್ವತೀ ಪತಯೇ ನಮಃ ||

|| ಓಂ ಹರ ಹರ ಮಹಾದೇವಾಯ ನಮಃ ||

***********

ಮೂರನೇ ಅಧ್ಯಾಯ

## ಶಿವ ದಾಸನ ಕಥೆ

ಶ್ರೀ ಪರಮಶಿವನು ತುಂಬಾ ದಯಾಮಯನು. ತನ್ನ ಭಕ್ತರೆಂದರೆ ಆ ಸ್ವಾಮಿಗೆ ಬಹಳ ಅಪ್ಯಾಯತೆ, ಅನುರಾಗ. ತನ್ನನ್ನು ನಂಬಿ ಪೂಜಿಸುವವರು ಈ ಹದಿನಾಲ್ಕು ಲೋಕಗಳಲ್ಲಿ ಎಲ್ಲೇ ಇದ್ದರೂ ನಿತ್ಯ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುವ ಅಮೃತಮುರ್ತಿ. ಪರಮೇಶ್ವರನಿಗೆ ತನ್ನನ್ನು ಪೂಜಿಸುವ ಭಕ್ತನು ಬಡವ, ಧನಿಕನೆಂಬ ಬೇಧವಿಲ್ಲ. ಮನಸ್ಪೂರ್ತಿಯಾಗಿ ಪೂಜಿಸಿದರೆ ಸಾಕು, ಅವರಿಗೆ ಸರ್ವಸಂಪದಗಳನ್ನು ಅನುಗ್ರಹಿಸುತ್ತಾನೆ. ಈಶ್ವರನೆಂದರೆ ಅಮಿತವಾದ ಐಶ್ವರ್ಯವನ್ನು ಪ್ರಸಾದಿಸುವವನೆಂದು ಅರ್ಥ. ಈಶ್ವರ ಶಬ್ದವು ಸಕಲ ಶುಭಗಳ ಸಂಕೇತ.

ಪೂರ್ವಕಾಲದಲ್ಲಿ ಗೋದಾವರೀ ನದಿತೀರದಲ್ಲಿ ಶಿವ ದಾಸನೆಂಬ ಮಹಾನ್ ಶಿವಭಕ್ತನು ಇರುತ್ತಿದ್ದನು. ಅವನು ಯಾವುದೊ ಚಿಕ್ಕ ಚಿಕ್ಕ ಕೆಲಸಗಳನ್ನು ಮಾಡುತ್ತಾ ಕಾಲವನ್ನು ಕಳೆಯುತ್ತಿದ್ದನು. ಚಿಕ್ಕಂದಿನಿಂದಲೂ ಶಿವಭಕ್ತಿ ಪಾರಾಯಣನಾಗಿ ಯಾವಾಗಲೂ ಶಿವನಾಮವನ್ನೇ ಸ್ಮರಿಸುತ್ತಿದ್ದನು. ಯಾವುದೇ ಕೆಲಸ ಮಾಡಿದರೂ ಪರಮೇಶ್ವರಾರ್ಪಣಮಸ್ತು ಎಂದು ಭಾವಿಸುತ್ತಿದ್ದನು. ಆ ಸ್ವಾಮಿಯ ದಯೆಯಿಂದ ಆ ಊರಿನ ಜಮೀನುದಾರ ಶೇಷಯ್ಯನ ಮನೆಯಲ್ಲಿ ಗುಮಾಸ್ತೆ ಉದ್ಯೋಗವು ದೊರಕಿತು. ಅದಕ್ಕೆ ಶಿವ ದಾಸನು ಬಹಳ ಸಂತೋಷಿಸಿ ಬದುಕಿದಷ್ಟು ದಿನ ಪ್ರತಿದಿನ ಕ್ರಮ ತಪ್ಪದೆ ಶಿವನ ಅಭಿಷೇಕವನ್ನು ಮಾಡುತ್ತೇನೆಂದು

ಸಂಕಲ್ಪಿಸಿದನು. ಆ ಪ್ರಕಾರ, ಆ ದಿನದಿಂದ ಪ್ರತಿದಿನ ಮುಂಜಾನೆದ್ದು ಶುಭ್ರವಾಗಿ ಸ್ನಾನಮಾಡಿ ತನ್ನ ಮನೆಯಲ್ಲಿರುವ ಶಿವಲಿಂಗಕ್ಕೆ ಸ್ವಚ್ಛವಾದ ನೀರಿನಿಂದ ಅಭಿಷೇಕವನ್ನು ಮಾಡಲು ಪ್ರಾರಂಭಿಸಿದನು.

ಶಿವ ದಾಸನು ತನಗೆ ಎಷ್ಟೇ ಕೆಲಸಗಳಿದ್ದರೂ ಶಿವನ ಅಭಿಷೇಕವನ್ನು ಮಾತ್ರ ಮರೆಯುತ್ತಿರಲಿಲ್ಲ. ಯಾವಾಗಲಾದರೂ ಕೆಲಸದ ನಿಮಿತ್ತ ರಾತ್ರಿ ನಿದ್ರೆಮಾಡುವುದು ಆಲಸ್ಯವಾದರೂ, ಮುಂಜಾನೆದ್ದು ತಪ್ಪದೆ ಅಭಿಷೇಕವನ್ನು ಮಾಡದೇ ಮನೆಯಿಂದ ಕಾಲು ಹೊರಗಿಡುತ್ತಿರಲಿಲ್ಲ. ಯಾವಾಗಲಾದರೂ ದೇಹದಲ್ಲಿ ಸ್ವಲ್ಪ ತೊಂದರೆಯಾದರೂ, ಎಷ್ಟು ಮಾತ್ರವೂ ಲೆಕ್ಕಕ್ಕಿಡುತ್ತಿರಲಿಲ್ಲ. ಎಲ್ಲದಕ್ಕೂ ಆ ಪರಮೇಶ್ವರನು ಇದ್ದಾನೆಂದು ಹೇಳುತ್ತಿದ್ದನು. ಶಿವ ದಾಸನ ಅಚಂಚಲ ಭಕ್ತಿಗೆ ಆ ಪರಮೇಶ್ವರನು ಬಹಳ ಸಂತೋಷಪಟ್ಟು ಅವನ ಜೀವಿತವು ಸರಾಗವಾಗಿ ಮುಂದುವರಿಯುವಂತೆ ಅನುಗ್ರಹಿಸಿದನು.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ರಾತ್ರಿ ದೊಡ್ಡ ಗಾಳಿ, ಮಳೆ ಬಂತು. ರಾತ್ರೆಲ್ಲಾ ಕುಂಭವೃಷ್ಟಿ ಸುರಿಯಿತು. ಬೆಳಗ್ಗೆಯಾದರೂ ಕಡಿಮೆಯಾಗಲಿಲ್ಲ. ಶಿವ ದಾಸನು ಆ ಮಳೆಯನ್ನು ಕೂಡಾ ಲೆಕ್ಕಿಸದೆ ಸರೋವರಕ್ಕೆ ಹೋಗಿ ಸ್ವಚ್ಛವಾದ ನೀರನ್ನು ತೆಗೆದುಕೊಂಡು ಬಂದು ಶಿವನಿಗೆ ಅಭಿಷೇಕವನ್ನು ಮಾಡಿದನು. ಆನಂತರ ಮಳೆಯೂ ಜೋರಾಗಿ ಸುರಿಯುತ್ತಿರುವುದರಿಂದ ಜಮೀನುದಾರನ ಮನೆಯನ್ನು ಸೇರಿವುದು ಸ್ವಲ್ಪ ತಡವಾಯಿತು. ಶಿವ ದಾಸನನ್ನು ನೋಡಿದ ಕೂಡಲೇ ಜಮೀನುದಾರನು ಗಟ್ಟಿಯಾಗಿ ಅರಚುತ್ತಾ, 'ಏನೋ! ಯಾಕಿಷ್ಟು ತಡವಾಯಿತು? ಒಂದುದಿನ ಅಭಿಷೇಕವನ್ನು ಮಾಡದೇ ಹೋದರೆ, ನಿಮ್ಮ ಶಿವನು ಸುಮ್ಮನಿರುವುದಿಲ್ವಾ?' ಎಂದು ಕೆಲವು ಮಾತುಗಳನ್ನು ಆಡಿದನು. ಆ ಮಾತುಗಳಿಗೆ ಶಿವ ದಾಸನು ತುಂಬಾ ಬಾಧೆಪಟ್ಟನು.

ಜಮೀನುದಾರನು ಈ ವಿಧವಾಗಿ ಶಿವ ದಾಸನಿಗೆ ಎಷ್ಟೋ ದುರ್ಭಾಷೆಗಳಿಂದ ಹೇಳುವುದನ್ನು ಗಮನಿಸಿದ ಪರಮೇಶ್ವರನಿಗೆ ತುಂಬಾ ಕೋಪಬಂತು. ಪರಮಶಿವನು ಎಂಥಹ ಭಕ್ತವತ್ಸಲನೆಂದರೆ ತನ್ನ ಭಕ್ತರಿಗೆ ಯಾರಾದರೂ ಒಂದುಮಾತು ಹೇಳಿದರೂ ಸುಮ್ಮನಿರುವುದಿಲ್ಲ. ಪ್ರತಿನಿತ್ಯ ತನ್ನನ್ನೇ ಸ್ಮರಿಸುತ್ತಾ ನಿತ್ಯ ಅಭಿಷೇಕವನ್ನು ನಿರ್ವಹಿಸುತ್ತಿರುವ ಶಿವ ದಾನನಿಗೆ ಆ ವಿಧವಾಗಿ ಹೇಳಿದ್ದಕ್ಕೆ ಜಮೀನುದಾರನ ಮೇಲೆ ಬಹಳ ಕೋಪ ಉಂಟಾಯಿತು. ಈ ವಿಧವಾಗಿ ಆ ಮಹಾಶಿವನ ಕೋಪಕ್ಕೆ ಒಳಗಾದ ಜಮೀನುದಾರನು, ಮರುದಿನವೇ ತೀವ್ರವಾದ ಪಕ್ಷವಾತಕ್ಕೆ ಒಳಗಾಗಿ ಮಾತು ಬಿದ್ದುಹೋಯಿತು. ಸ್ವಲ್ಪಕಾಲಕ್ಕೆ ಅವನ ಐಶ್ವರ್ಯವೆಲ್ಲಾ ಬರಿದಾಯಿತು. ಹೀಗೆ ಯಾಕೆ ಜರುಗಿತೆಂದು ಅವನಿಗೆ ಅರ್ಥವಾಗಲಿಲ್ಲ.

ಒಂದುದಿನ ಆ ಊರಿಗೆ ಒಬ್ಬ ಸಾಧುವು ಬಂದನು. ಆ ಸಾಧುವು ಬಹಳ ಮಹಿಮೆಯುಳ್ಳವನೆಂದು, ಯಾವುದೇ ರೋಗವಿದ್ದರೂ ಗುಣಮಾಡುವನೆಂದು ಜನರು ಹೇಳುತ್ತಿದ್ದರು. ಜಮೀನುದಾರನ ಹೆಂಡತಿಯು ಆ ಸಾಧುವನ್ನು ಭೇಟಿಮಾಡಿದಳು. ಅವಳ ಮನವಿಯನ್ನು ಕೇಳಿ, ಅವನು ದಯೆತೋರಿ ಜಮೀನುದಾರನನ್ನು ನೋಡಲು ಮನೆಗೆ ಬಂದನು. ಒಂದುಸಾರಿ ಕಣ್ಣುಗಳನ್ನು ಮುಚ್ಚಿ ಧ್ಯಾನಮಾಡಿ, ಜಮೀನುದಾರನೊಂದಿಗೆ ಹೀಗೆ ಹೇಳಿದನು. 'ಮಗನೇ! ನೀನು ಕೆಲವು ಸಮಯದ ಹಿಂದೆ, ನಿನ್ನ ಹತ್ತಿರ ಕೆಲಸಮಾಡುವ ಶಿವ

ದಾಸನಿಗೆ ಅನವಸರವಾಗಿ ದೂಷಿಸಿದ್ದಿ. ಶ್ರೀ ಪರಮೇಶ್ವರನಿಗೆ ತುಂಬಾ ಪ್ರಿಯಭಕ್ತನಾದ ಅವನಿಗೆ ಆ ವಿಧವಾಗಿ ದೂಷಿಸಿದ್ದರಿಂದ ಆ ಸ್ವಾಮಿಯ ಕೋಪಕ್ಕೆ ಗುರಿಯಾಗಿದ್ದಿ. ಆದ್ದರಿಂದಲೇ ಈ ಅನರ್ಥಗಳೆಲ್ಲಾ ಜರುಗುತ್ತಿವೆ' ಎಂದು ಹೇಳಿ ಜಮೀನುದಾರನ ಹೆಂಡತಿಯ ಕಡೆಗೆ ತಿರುಗಿ 'ತಾಯೀ! ಆ ಶಿವ ದಾಸನನ್ನು ನಾಳೆಯೇ ನಿಮ್ಮ ಮನೆಗೆ ಕರೆಸಿ ಅವನ ಕಾಲುಗಳನ್ನು ತೊಳೆದು ಪೂಜೆಮಾಡಿ' ಎಂದು ಹೇಳಿದನು. ಆಗ ಪರಮಶಿವನು ಸಂತೋಷಿಸುತ್ತಾನೆ, ನಿಮ್ಮ ಬಾಧೆಗಳೆಲ್ಲಾ ನಿವಾರಣೆಯಾಗುತ್ತದೆ' ಎಂದನು.

ಆ ಮರುದಿನವೇ ಶಿವ ದಾಸನನ್ನು ಜಮೀನುದಾರ ದಂಪತಿಗಳು ಅವರ ಮನೆಗೆ ಕರೆಯಿಸಿ, ತಮ್ಮ ತಪ್ಪುಗಳನ್ನು ಕ್ಷಮಿಸಬೇಕೆಂದು ಬೇಡಿಕೊಂಡರು. ಅವನ ಕಾಲುಗಳನ್ನು ತೊಳೆದು, ಆ ನೀರನ್ನು ಆ ದಂಪತಿಗಳಿಬ್ಬರೂ ತಲೆಯ ಮೇಲೆ ಸಿಂಪಡಿಸಿಕೊಂಡರು. ಅಷ್ಟೇ! ಜಮೀನುದಾರನ ಅನಾರೋಗ್ಯವು ಒಮ್ಮೆಲೇ ಮಾಯವಾಯಿತು. ಸಂಪೂರ್ಣ ಆರೋಗ್ಯದಿಂದ ಎದ್ದು ನಿಂತುಕೊಂಡನು. ಆ ದಂಪತಿಗಳಿಬ್ಬರೂ ಬಹಳ ಸಂತೋಷಪಟ್ಟು ಶಿವ ದಾಸನಿಗೆ ನಮಸ್ಕರಿಸಿ, ಆ ಶ್ರೀ ಪರಮೇಶ್ವರನನ್ನು ಅನೇಕ ವಿಧಗಳಿಂದ ಸ್ತುತಿಸಿದರು. ಆನಂತರ ಜಮೀನುದಾರನು ಒಳ್ಳೆಯ ಶಿವಭಕ್ತನಾಗಿ, ಪ್ರತಿನಿತ್ಯ ಶ್ರೀ ಪರಮೇಶ್ವರನಿಗೆ ಅಭಿಷೇಕವನ್ನು ಮಾಡುತ್ತಾ ಕಾಲ ಕಳೆಯುತ್ತಿದ್ದನು. ಆ ಊರಲ್ಲಿ ಸುಂದರವಾದ ಶಿವಾಲಯವನ್ನು ನಿರ್ಮಿಸಿ, ಜೀವಿಸಿದಷ್ಟು ದಿನ ಸುಖವಾಗಿ ಜೀವಿಸಿ, ಕೊನೆಗೆ ಮುಕ್ತಿಯನ್ನು ಪಡೆದನು.

ಮೂರನೇ ಅಧ್ಯಾಯವು ಸಂಪೂರ್ಣವಾಯಿತು
|| ಓಂ ನಮಃ ಪಾರ್ವತೀ ಪತಯೇ ನಮಃ ||
|| ಓಂ ಹರ ಹರ ಮಹಾದೇವಾಯ ನಮಃ ||
*******

ನಾಲ್ಕನೇ ಅಧ್ಯಾಯ

## ಗಂಗರಾಜು ಕಥೆ

ಶ್ರೀ ಪರಮೇಶ್ವರನು ಭಕ್ತಸುಲಭನು. ದಿನದಲ್ಲಿ ಒಂದುಸಾರಿಯಾದರೂ ಶ್ರೀ ಪರಮೇಶ್ವರನನ್ನು ಮನಸ್ಸಿನಲ್ಲಿ ನೆನೆದರೆ, ಜೀವಿತವೆಲ್ಲವು ಶುಭಪ್ರದವಾಗಿ ಮುಂದುವರಿಯುತ್ತದೆ. ಯಾವುದೇ ಅಪಾಯ ಹತ್ತಿರ ಸುಳಿಯುವುದಿಲ್ಲ. ಅಪಮೃತ್ಯು ಭಯವು ಇರುವುದಿಲ್ಲ. ಸರ್ವ ಶುಭಗಳು ಉಂಟಾಗುತ್ತದೆ. ಮನಸ್ಫೂರ್ತಿಯಾಗಿ ಆ ಸ್ವಾಮಿಯನ್ನು ಪೂಜಿಸುವವರ ಮನೆಯಲ್ಲಿ ಸಕಲ ಸೌಭಾಗ್ಯ ಸಂಪತ್ತುಗಳು ತುಂಬಿರುತ್ತವೆ. ಯಾವುದಕ್ಕೂ ಕೊರತೆಯಿರದು. ಜ್ಞಾನವು, ಪಾಂಡಿತ್ಯವು ಲಭಿಸುತ್ತದೆ. ಕೈಹಿಡಿದ ಕಾರ್ಯಗಳೆಲ್ಲಾ ಜಯಪ್ರದವಾಗಿ ನೆರವೇರುತ್ತದೆ.

ಪೂರ್ವಕಾಲದಲ್ಲಿ ಗಂಗಾ ನದಿತೀರದಲ್ಲಿ ಗಂಗರಾಜು ಎಂಬ ಚಿಕ್ಕ ವ್ಯಾಪಾರಸ್ಥನು ಇದ್ದನು. ಅವನು ಅನೇಕ ಚಿಕ್ಕ-ಚಿಕ್ಕ ವ್ಯಾಪಾರಗಳನ್ನು ಮಾಡುತ್ತಾ ಸ್ವಲ್ಪ ಸಮಯದಲ್ಲೇ ಬಹಳ ಹಣ ಸಂಪಾದಿಸಿದನು. ಅಷ್ಟು ಧನ ಸಂಪಾದನೆ ಮಾಡಿದನಾದರೂ, ಯಾವುದೇ ದಾನಧರ್ಮಗಳನ್ನು ಮಾಡುತ್ತಿರಲಿಲ್ಲ. ಕಡು ಜಿಪುಣನೆಂದು ಹೆಸರು ಪಡೆದುಕೊಂಡನು. ನಕಲಿ ವ್ಯಾಪಾರಗಳನ್ನು ಮಾಡಿ, ಪ್ರಜೆಗಳಿಂದ ವಿಪರೀತವಾಗಿ ದೋಚುತ್ತಿದ್ದನು.

ಹಾಗೆ ಜೀವಿಸಿದ ಗಂಗರಾಜು ಕೆಲವು ವರ್ಷಗಳ ನಂತರ, ದೇಹತ್ಯಾಗ ಮಾಡಿ, ನಂತರ ಮರುಜನ್ಮದಲ್ಲಿ ಆ ಹಿಂದಿನ ಜನ್ಮದ ಪಾಪದ ಫಲವಾಗಿ, ಕುರುಡನಾಗಿ ಜನ್ಮಿಸಿದನು. ಒಂದು ಕಡುಬಡತನದ ಕುಟುಂಬದಲ್ಲಿ, ಹುಟ್ಟಿನಿಂದ ಕುರುಡನಾಗಿ ಜನಿಸಿದ ಗಂಗರಾಜು, ಚಿಕ್ಕತನದಲ್ಲಿಯೇ ತಂದೆತಾಯಿಗಳನ್ನು ಕಳೆದುಕೊಂಡನು. ಯಾವುದೇ ಆಧಾರವಿಲ್ಲದೆ, ಜೋಲಿ ಹಿಡಿದು, ಬೀದಿ-ಬೀದಿಯನ್ನು ತಿರುಗುತ್ತಾ ಭಿಕ್ಷಾಟನೆ ಮಾಡುತ್ತಾ ಬದುಕುತ್ತಿದ್ದನು. ಒಂದೊಂದು ಊರಲ್ಲಿ ಕೆಲವು ತಿಂಗಳುಗಳು ವಾಸಮಾಡುತ್ತಾ, ನಂತರ ಮತ್ತೊಂದು ಊರನ್ನು ಸೇರುತ್ತಿದ್ದನು. ಹಾಗೆ ಕೆಲವು ದಿನಗಳ ನಂತರ ಗಂಗರಾಜು 'ಲಿಂಗಾಲಪಲ್ಲೆ' ಎನ್ನುವ ಊರನ್ನು ಸೇರಿದನು. ಆ ಊರಲ್ಲಿರುವ ಶ್ರೀ ಪರಮೇಶ್ವರನ ದೇವಾಲಯವು ಮಹಾಮಾನ್ವಿತವಾದದ್ದೆಂದು ಪ್ರಸಿದ್ಧಿ ಪಡೆದಿತ್ತು. ಅಷ್ಟೇಅಲ್ಲ, ಆ ಊರಲ್ಲಿ ಬಹುತೇಕ ಪ್ರತಿ ಮರದ ಕೆಳಗೆ ಒಂದು ಶಿವಲಿಂಗ ಇರುತ್ತಿತ್ತು. ಪುರಾತನ ಕಾಲದಲ್ಲಿ ದೇವತೆಗಳೇ ಆ ಶಿವಲಿಂಗಗಳನ್ನು ಪ್ರತಿಷ್ಠಿಸಿದರೆಂದು ಊರಿನ ಪ್ರಜೆಗಳು ಹೇಳಿಕೊಳ್ಳುತ್ತಿದ್ದರು.

ಆ ಊರನ್ನು ಸೇರಿದ ಗಂಗಾರಾಜು, ಒಂದು ದೊಡ್ಡ ಮರದ ಕೆಳಗೆ ವಾಸಮಾಡಿಕೊಂಡಿದ್ದನು. ಪ್ರತಿದಿನ ಬೆಳಿಗ್ಗೆ ಮತ್ತು ಸಾಯಂಕಾಲ ಊರೊಳಗೆ ಹೋಗಿ ಭಿಕ್ಷಾಟನೆ ಮಾಡಿ ಬರುತ್ತಿದ್ದನು. ಸಿಕ್ಕಿದನ್ನು ತಿನ್ನುತ್ತಾ ಕಾಲವನ್ನು ಕಳೆಯುತ್ತಿದ್ದನು. ಒಂದುದಿನ ಬೆಳಿಗ್ಗೆ ಹಾಗೆಯೇ ಭಿಕ್ಷಾಟನೆಗೆ ಹೊರಟ ಗಂಗರಾಜುಗೆ ಯಾರೂ ಕೂಡಾ ಯಾವುದೇ ಪದಾರ್ಥವನ್ನು ಅವನ ಪಾತ್ರೆಯಲ್ಲಿ ಹಾಕಲಿಲ್ಲ. ಸರಿ, ಸಾಯಂಕಾಲವಾದರೂ ಏನಾದರೂ ಸಿಗುತ್ತದೇನೋ ಎಂದು ಭಾವಿಸಿದನು. ಸಾಯಂಕಾಲ ತಿರುಗಿ ಎಲ್ಲಾ ಬೀದಿಗಳನ್ನು ತಿರುಗಿದನು. ಆದರೆ, ಯಾರೂ ಯಾವ ಪದಾರ್ಥವನ್ನು ಭಿಕ್ಷೆ ಹಾಕಲಿಲ್ಲ. ಪ್ರತಿದಿನ ಯಾವುದೋ ಒಂದು ಪದಾರ್ಥ ತನಗೆ ಸಿಗುತ್ತಿತ್ತು. ಈ ದಿನ ಯಾರೂ ತನಗೆ ಯಾಕೆ ಭಿಕ್ಷೆ ಹಾಕಲಿಲ್ಲವೋ ಅರ್ಥವಾಗಲಿಲ್ಲ. ಬೆಳಗ್ಗೆಯಿಂದ ಯಾವುದೇ ಆಹಾರವಿಲ್ಲದಿರುವುದರಿಂದ, ಶರೀರದಲ್ಲಿ ಉತ್ಸಾಹ, ತಾಳ್ಮೆಯಿಲ್ಲದೆ ತಿರುಗಿ ತನ್ನ ಮರದ ಕಡೆಗೆ ಹೊರಟನು. ಒಮ್ಮೆಲೇ ದೊಡ್ಡಮಳೆ ಶುರುವಾಯಿತು. ಮಳೆಗೆ ಗಂಗರಾಜು ನೆನೆದು ಒದ್ದೆಯಾದನು. ಕೊನೆಗೆ ಒಂದು ಮರದ ಕೆಳಗೆ ಸೇರಿದನು. ತನ್ನ ಪಾತ್ರೆ ತುಂಬಾ ಮಳೆನೀರು ಸೇರಿರುವುದರಿಂದ, ಅದನ್ನು ಪಕ್ಕಕ್ಕೆ ಎಸೆದನು. ಅಷ್ಟೇ! ಆಗ ಒಂದು ಅದ್ಭುತ ಜರುಗಿತು.

ಗಂಗರಾಜುಗೆ ಒಮ್ಮೆಲೇ ಕಣ್ಣಿನ ದೃಷ್ಟಿ ಬಂತು. ಅಷ್ಟೇಅಲ್ಲ, ತನ್ನ ಪಕ್ಕದಲ್ಲೇ ಚಿನ್ನದ ನಾಣ್ಯಗಳ ಮೂಟೆ ಕಾಣಿಸಿತು. ಎದುರಲ್ಲಿ ಶ್ರೀ ಪರಮೇಶ್ವರನು ಪ್ರತ್ಯಕ್ಷನಾದನು. ಗಂಗರಾಜು ಒಮ್ಮೆಲೇ ಆಶ್ಚರ್ಯಪಟ್ಟನು. ಏನೀ ಅದ್ಭುತವೆಂದು ಭಾವಿಸುತ್ತಿರುವಾಗ ಶ್ರೀ ಪರಮೇಶ್ವರನು ಹೀಗೆ ಹೇಳಿದನು. 'ಮಗನೇ! ಈ ದಿನವು ನನಗೆಷ್ಟೋ ಪ್ರಿಯವಾದ ಸೋಮವಾರವು. ಅದರಲ್ಲೂ ಏಕಾದಶಿ. ಊರಿನ ಪ್ರಜೆಗಳೆಲ್ಲರೂ ಉಪವಾಸವಿರುವುದರಿಂದ ನಿನಗೆ ಯಾವುದೇ ಪದಾರ್ಥವು ಸಿಗಲಿಲ್ಲ. ಆದುದರಿಂದ, ನೀನು ಕೂಡ ಉಪವಾಸ ಮಾಡಿದವನಾಗಿದ್ದಿ. ಅಷ್ಟೇಅಲ್ಲ, ಕಣ್ಣುಕಾಣದೆ, ನಿನಗೆ ತಿಳಿಯದೆ, ನೀನು ಎಸೆದ ನಿನ್ನ ಪಾತ್ರೆಯಲ್ಲಿರುವ ಮಳೆಯ ನೀರು, ಪಕ್ಕದಲ್ಲಿರುವ ಶಿವಲಿಂಗದ ಮೇಲೆ ಬಿತ್ತು. ಆ ವಿಧವಾಗಿ ನೀನು ನನಗೆ ಅಭಿಷೇಕವನ್ನು ಮಾಡಿದವನಾಗಿದ್ದಿ. ಇಷ್ಟು ಪವಿತ್ರವಾದ ದಿನ, ಉಪವಾಸವಿದ್ದು ನನಗೆ ಅಭಿಷೇಕವನ್ನು ಮಾಡಿ, ಬಹಳ ಪುಣ್ಯವನ್ನು ಸಂಪಾದಿಸಿಕೊಂಡಿದ್ದಿ. ಆದ್ದರಿಂದ ನಿನಗೆ ಕಣ್ಣಿನ ದೃಷ್ಟಿಯನ್ನು ಪ್ರಸಾದಿಸುತ್ತಿದ್ದೇನೆ. ಈ ಚಿನ್ನದ ನಾಣ್ಯಗಳನ್ನು ತೆಗೆದುಕೊಂಡು, ಯಾವುದಾದರೂ

ವ್ಯಾಪಾರವನ್ನು ಮಾಡಿಕೊಂಡು, ಸುಖವಾಗಿ ಜೀವಿಸು' ಎಂದು ಹೇಳಿ ಶ್ರೀ ಪರಮೇಶ್ವರನು ಅದೃಶ್ಯನಾದನು.

ಜರುಗಿದ ಈ ಚಮತ್ಕಾರಕ್ಕೆ, ಗಂಗರಾಜು ತುಂಬಾ ಸಂತೋಷಪಟ್ಟು, ಆ ಧನದಿಂದ ವ್ಯಾಪಾರವನ್ನು ಪ್ರಾರಂಭಿಸಿ, ಬಹಳ ಧನವನ್ನು ಸಂಪಾದಿಸಿದನು. ಮಹಾನ್ ಶಿವ ಭಕ್ತನೆಂದು ಹೆಸರುಪಡೆದು, ಅನೇಕ ದಾನಧರ್ಮಗಳನ್ನು ಮಾಡಿದನು. ಬದುಕಿದಷ್ಟು ದಿನ ಸುಖವಾಗಿ ಬದುಕಿ, ಕೊನೆಗೆ ಮುಕ್ತಿಯನ್ನು ಹೊಂದಿದನು. ಶ್ರೀ ಪರಮೇಶ್ವರನು ಅಲ್ಪಸಂತೋಷಿ. ಒಂದು ಬಿಲ್ವಪತ್ರೆಯಿಂದ ಪೂಜಿಸಿದರೂ ಬಹಳ ತೃಪ್ತಿ ಪಡುತ್ತಾನೆ. ಸರ್ವ ಸಂಪದಗಳನ್ನು ಅನುಗ್ರಹಿಸುತ್ತಾನೆ. ಒಳ್ಳೆಯ ಆರೋಗ್ಯವನ್ನು ಪ್ರಸಾದಿಸುತ್ತಾನೆ. ಅಂಥಹ ಅಮೃತಮೂರ್ತಿಯಾದ ಶ್ರೀ ಮಹೇಶ್ವರನಿಗೆ ಇದುವೇ ನಮ್ಮ ನಮಸ್ಕಾರಗಳು.

ನಾಲ್ಕನೇ ಅಧ್ಯಾಯವು ಸಂಪೂರ್ಣವಾಯಿತು

|| ಓಂ ನಮಃ ಪಾರ್ವತೀ ಪತಯೇ ನಮಃ ||

|| ಓಂ ಹರ ಹರ ಮಹಾದೇವಾಯ ನಮಃ ||

*******

ಐದನೇ ಅಧ್ಯಾಯ

## ಗೋಪಾಲನ ಕಥೆ

ಶ್ರೀ ಪರಮೇಶ್ವರನು ಪರಮದಯಾಳು. ತನ್ನನ್ನು ನಂಬಿ ಪೂಜಿಸುವವರಿಗೆ ಯಾವುದೇ ಚಿಕ್ಕ ಆಪತ್ತು ಬಂದರೂ, ತಕ್ಷಣವೇ ಬಂದು ರಕ್ಷಿಸುವ ಅಮೃತಮೂರ್ತಿ. ಜೀವನದಲ್ಲಿ ಒಂದುಬಾರಿಯಾದರೂ 'ಓಂ ನಮಃ ಶಿವಾಯ' ಹೇಳಿದರೆ ಸಾಕು, ಅವನು ಬದುಕಿದಷ್ಟು ದಿನ, ಅವನನ್ನು ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುತ್ತಾನೆ. ಆ ಸ್ವಾಮಿಯು 'ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ' ಎಂಬ ಭಕ್ತನಿಗೆ ಈ ಐದು ಕಥೆಗಳನ್ನು ಅನುಗ್ರಹಿಸಿದನು. ಈ ಕಥೆಗಳನ್ನು ನಿತ್ಯ ಪಠಿಸುವವರು, ತನ್ನ ಅನುಗ್ರಹಕ್ಕೆ ಪಾತ್ರರಾಗುತ್ತಾರೆಂದು ಆ ಸ್ವಾಮಿಯೇ ತಿಳಿಸಿದ್ದಾನೆ.

ಪೂರ್ವಕಾಲದಲ್ಲಿ, ಏಕನಾಥಪುರಂನಲ್ಲಿ ಶ್ರೇಷ್ಠ ಶಿವಾಲಯವು ಇತ್ತು. ಆ ದೇವಾಲಯದಲ್ಲಿ ಬೆಳಗಿದ ಶಿವಲಿಂಗವನ್ನು ಸಾಕ್ಷಾತ್ ದೇವತೆಗಳೇ ಪ್ರತಿಷ್ಠಿಸಿದರೆಂದು ಜನರು ಹೇಳುತ್ತಿದ್ದರು. ಆ ಸ್ವಾಮಿಯು ಬಹಳ ಮಹಿಮೆಯುಳ್ಳವನೆಂದು ಸುತ್ತುಮುತ್ತಲಿನ ಗ್ರಾಮಗಳಲ್ಲಿ ಪ್ರಖ್ಯಾತನಾದನು. ಭಕ್ತರು ಗಾಡಿ ಕಟ್ಟಿಕೊಂಡು ಆ ದೇವಲಾಯಕ್ಕೆ ಬಂದು ಶ್ರೀ ಪರಮೇಶ್ವರನ ಸೇವೆಯನ್ನು ಮಾಡಿ ಹೋಗುತ್ತಿದ್ದರು. ಪ್ರತಿ ಸಂವತ್ಸರದ ಕಾರ್ತೀಕ ಮಾಸದಲ್ಲಿ, ಆ ದೇವಾಲಯದಲ್ಲಿ ಬಹಳ ವಿಜೃಂಭಣೆಯಿಂದ ಉತ್ಸವಗಳು ಜರುಗುತ್ತಿತ್ತು. ದೇವಾಲಯವನ್ನು ಬಣ್ಣ ಬಣ್ಣದ ಹೂವುಗಳಿಂದ ಅಲಂಕರಿಸುತ್ತಿದ್ದರು. ಅನೇಕ ಪ್ರತ್ಯೇಕ ಪೂಜೆಗಳನ್ನು ಮಾಡುತ್ತಿದ್ದರು.

ಆ ದೇವಾಲಯದಲ್ಲಿ ಭಿಕ್ಷಮಯ್ಯ ಎಂಬ ಪೂಜಾರಿ ಇರುತ್ತಿದ್ದನು. ಅವನು ವೇದಗಳನ್ನೆಲ್ಲಾ ಔಪಾಸನ/ಕರಗತ ಮಾಡಿಕೊಂಡವನೆಂದು ಜನರು ಹೇಳಿಕೊಳ್ಳುತ್ತಿದ್ದರು. ನಮಕ, ಚಮಕಗಳಿಂದ ನಿತ್ಯ ಶ್ರೀ ಪರಮೇಶ್ವರನನ್ನು ಆರಾಧಿಸುತ್ತಿದ್ದನು. ಆದರೆ, ತನಗೆ ಎಲ್ಲಾ

ವಿದ್ಯೆಗಳು ತಿಳಿದಿದೆಯೆಂದು, ತುಂಬಾ ಮಹಾನ್ ಪಂಡಿತನೆಂದು ಅವನಿಗೆ ಸ್ವಲ್ಪ ಅಹಂಕಾರವಿತ್ತು. ಯಾರಿಗಾದರೂ ಅಹಂಕಾರವು ಸೂಕ್ತವಲ್ಲ ಅಲ್ವಾ? ಶ್ರೀ ಪರಮೇಶ್ವರನು ಇವನಿಗೆ ಬುದ್ಧಿ ಕಲಿಸಬೇಕೆಂದು ಭಾವಿಸಿದನು.

ಒಂದುದಿನ ದೇವಾಲಯದಲ್ಲಿ ನಿತ್ಯಪೂಜೆಗೆ ಉಪಯೋಗಿಸುವ ಪಾತ್ರೆಗಳಲ್ಲಿ, ಒಂದು ಚಿಕ್ಕ ಬೆಳ್ಳಿಪಾತ್ರೆ ಮಾಯವಾಯಿತು. ದೇವಾಲಯವನ್ನೆಲ್ಲ ಎಷ್ಟು ಹುಡುಕಿದರೂ ಕಾಣಿಸಲಿಲ್ಲ. ದೇವಾಲಯದಲ್ಲಿ ಗೋಪಾಲನೆಂಬವನು ಚಿಕ್ಕ ಚಿಕ್ಕ ಕೆಲಸಗಳನ್ನು ಮಾಡುತ್ತಾ ಕಾಲವನ್ನು ಕಳೆಯುತ್ತಿದ್ದನು. ದೇವಾಲಯ ಆವರಣವನ್ನು ಗುಡಿಸಿ, ನೀರು ಸಿಂಪಡಿಸಿ, ತೊಳೆಯುತ್ತಿದ್ದನು. ಯಾವುದೇ ವಿದ್ಯೆಯಿಲ್ಲದಿದ್ದರೂ, ಯಾವಾಗಲು ಆ ಶ್ರೀ ಪರಮೇಶ್ವರನನ್ನೇ ಧ್ಯಾನಿಸುತ್ತಾ ಕಾಲ ಕಳೆಯುತ್ತಿದ್ದನು. ಭಿಕ್ಷಮಯ್ಯನು ಈ ಗೋಪಾಲನೇ ಆ ಬೆಳ್ಳಿಪಾತ್ರೆಯನ್ನು ಕದ್ದುಕೊಂಡಿರುತ್ತಾನೆಂದು ಭಿವಿಸಿದನು.

ಸಾಯಂಕಾಲ ಗೋಪಾಲನನ್ನು ಕರೆದು, ಇದೇ ವಿಷಯವಾಗಿ ಜೋರಾಗಿ ಕೇಳಿದನು. ಎಷ್ಟು ಜೋರಾಗಿ ಕೇಳಿದರೂ, ತಾನು ಆ ಕೆಲಸವನ್ನು ಮಾಡಿಲ್ಲವೆಂದು, ತನಗೆ ಅಂಥಹ ಉದ್ದೇಶವಿಲ್ಲವೆಂದು ಹೇಳಿದನು. ಆದರೆ, ಭಿಕ್ಷಮಯ್ಯ ಮಾತ್ರ ಅವನು ಹೇಳಿದ ಮಾತುಗಳನ್ನು ನಂಬಲಿಲ್ಲ. ಜೋರಾಗಿ ಅರಚಿ, ಕೋಪದಿಂದ ಉರಿದುಹೋದನು. ಪಕ್ಕದಲ್ಲಿರುವ ಕೋಲನ್ನು ತೆಗೆದುಕೊಂಡು, ಗೋಪಾಲನನ್ನು ಗಟ್ಟಿಯಾಗಿ ಹೊಡೆದನು. ಎಷ್ಟು ಹೊಡೆತಗಳನ್ನು ತಿಂದರೂ, ಗೋಪಾಲನು ಮಾತ್ರ ಕದಲದೇ ಕೈಗಳನ್ನು ಜೋಡಿಸಿಕೊಂಡು ತಾನು ಆ ಕಳ್ಳತನವನ್ನು ಮಾಡಲಿಲ್ಲವೆಂದು ಹೇಳಿದನು. ಬೇಸರಬಂದು ಭಿಕ್ಷಮಯ್ಯನು ಮನೆಗೆ ಹೊರಟು ಹೋದನು. ಗೋಪಾಲನು ತನ್ನ ಮೇಲೆ ಅನವಸರವಾಗಿ ಬಂದ ನಿಂದೆಗೆ ಬಾಧೆಪಡುತ್ತಾ, ಆ ಶ್ರೀ ಪರಮೇಶ್ವರನನ್ನೇ ನೆನೆಯುತ್ತಾ ನಿದ್ರೆಹೋದನು.

ಮರುದಿನ ಮುಂಜಾನೆ ಭಿಕ್ಷಮಯ್ಯನು, ಗರ್ಭಾಲಯದ ಬಾಗಿಲುಗಳನ್ನು ತೆರೆದಾಗ, ಅಲ್ಲಿ ಕಾಣಿಸಿದ ದೃಶ್ಯವನ್ನು ನೋಡಿ ನಿಶ್ಚೇಷ್ಟನಾದನು. ಶಿವಲಿಂಗದ ಮೇಲೆ ಅನೇಕ ಹೊಡೆತದ ಗೆರೆಗಳು ಕಾಣಿಸಿತು. ತಕ್ಷಣ ಜರುಗಿದ ವಿಷಯವು ಭಿಕ್ಷಮಯ್ಯನಿಗೆ ಅರ್ಥವಾಯಿತು. ತಾನು ಗೋಪಾಲನಿಗೆ ಹೊಡೆದ ಪೆಟ್ಟುಗಳನ್ನು ಸ್ವಾಮಿಯು ತಾನು ತೆಗೆದುಕೊಂಡನು. ಎಂಥಹ ಮಹಾಪರಾಧವನ್ನು ಮಾಡಿದೆನೆಂದು ಆಲೋಚಿಸಿದನು. ಇಷ್ಟರಲ್ಲಿ ಪಕ್ಕದಲ್ಲಿರುವ ತೂತಿನಿಂದ ಒಂದು ಇಲಿ ಆ ಬೆಳ್ಳಿಪಾತ್ರೆಯನ್ನು ಬಾಯಲ್ಲಿ ಕಚ್ಚಿಕೊಂಡು ಬಂದು, ಅಲ್ಲೇ ಬಿಸಾಕಿ, ಅಷ್ಟೇ ವೇಗದಿಂದ ಹೊರಟೋಯಿತು. ಭಿಕ್ಷಮಯ್ಯನಿಗೆ ತುಂಬಾ ನೋವಾಯಿತು. ಗೋಪಾಲನನ್ನು ಅನ್ಯಾಯವಾಗಿ ಹೊಡೆದೆನೆಂದು, ತನ್ನ ಅಪರಾಧವನ್ನು ಕ್ಷಮಿಸೆಂದು ಆ ಶ್ರೀ ಪರಮೇಶ್ವರನನ್ನು ಅನೇಕ ವಿಧಗಳಿಂದ ಬೇಡಿಕೊಂಡನು. ಆನಂತರ, ಆ ಶಿವಲಿಂಗಕ್ಕೆ ಪಂಚಾಮೃತದಿಂದ ಅಭಿಷೇಕವನ್ನು ಮಾಡಿದನು. ಗೋಪಾಲನನ್ನು ಕರೆದು, ತನ್ನ ತಪ್ಪನ್ನು ಕ್ಷಮಿಸೆಂದು ಬೇಡಿಕೊಂಡನು.

ಶ್ರೀ ಪರಮೇಶ್ವರನಿಗೆ ಬೇಕಾದದ್ದು ಪಾಂಡಿತ್ಯ, ಸರ್ವ ಶಾಸ್ತ್ರಗಳು, ತಿಳಿದುಕೊಂಡಿರುವ ಜ್ಞಾನವಲ್ಲ, ಇವೆಲ್ಲಾ ಇದ್ದೂ, ಅಹಂಕಾರವಿದ್ದರೆ, ಆ ಸ್ವಾಮಿಯ ಅನುಗ್ರಹವು ಸಿಗುವುದಿಲ್ಲ.

ಶ್ರೀ ಪರಮೇಶ್ವರನಿಗೆ ಬೇಕಾದದ್ದು ಸ್ವಚ್ಛವಾದ ನಿರ್ಮಲ ಭಕ್ತಿ. ಪ್ರಶಾಂತಚಿತ್ತ, ನಿಷ್ಕಲ್ಮಶ ಹೃದಯದಿಂದ ಆ ಸ್ವಾಮಿಯನ್ನು ದಿನಾಲು ಒಂದುಸಾರಿ ನೆನೆದರೆ ಸಾಕು, ಆ ಸ್ವಾಮಿಯು ನಮ್ಮನ್ನು ತಪ್ಪದೆ ಅನುಗ್ರಹಿಸುತ್ತಾನೆ. ಅಂಥಹ ಅಮೃತಮೂರ್ತಿಯಾದ ಶ್ರೀ ಪರಮೇಶ್ವರನಿಗೆ ಇವೇ ನಮ್ಮ ನಮಸ್ಕಾರಗಳು.

ಐದನೇ ಅಧ್ಯಾಯವು ಸಂಪೂರ್ಣವಾಯಿತು

|| ಓಂ ನಮಃ ಪಾರ್ವತೀ ಪತಯೇ ನಮಃ ||

|| ಓಂ ಹರ ಹರ ಮಹಾದೇವಾಯ ನಮಃ ||

ಶ್ರೀ ಮಹೇಶ್ವರ ವ್ರತ ಸಮಾಪ್ತಂ

**ಮಂಗಳಂ ಭಗವಾನ್ ಶಂಭೋ | ಮಂಗಳಂ ವೃಷಭಧ್ವಜ ||**
**ಮಂಗಳಂ ಪಾರ್ವತೀನಾಥ | ಮಂಗಳಂ ಭಕ್ತವತ್ಸಲಾ ||**
***********

# ಮಂಗಳಾರತಿ

ಓಂ ಓಂ ಮಂಗಳಂ | ಓಂಕಾರ ಮಂಗಳಂ ||
ಓಂ ನಮಃ ಶಿವಾಯ ಮಂಗಳಂ ||

ನ ನ ಮಂಗಳಂ | ನಾಕಾರ ಮಂಗಳಂ ||
ನಾಗಬಿಂದು ಕಳಾತೀತ | ದೇವ ಮಂಗಳಂ || ಓಂ ||

ಮಃ ಮಾ ಮಂಗಳಂ | ಮಕಾರ ಮಂಗಳಂ ||
ಮಹಾದೇವ ದಯಾಸಿಂಧೋ | ಈಶ ಮಂಗಳಂ || ಓಂ ||

ಶಿ ಶೀ ಮಂಗಳಂ | ಶೀಕಾರ ಮಂಗಳಂ ||
ಸಿದ್ದ ಬುದ್ದ ರಹಿತ | ಪರಬ್ರಹ್ಮ ಮಂಗಳಂ || ಓಂ ||

ವಾ ವಾ ಮಂಗಳಂ | ವಕಾರ ಮಂಗಳಂ ||
ವಾದ ಭೇದ ರಹಿತ | ಪರಬ್ರಹ್ಮ ಮಂಗಳಂ || ಓಂ ||

ಯ ಯಾ ಮಂಗಳಂ | ಯಕಾರ ಮಂಗಳಂ ||
ಯಥಾತತ್ಯ ಪರಿಜ್ಞಾನ | ವೇದ್ಯ ಮಂಗಳಂ || ಓಂ ||

|| ಓಂ ಮಂಗಳಂ | ಓಂಕಾರ ಮಂಗಳಂ ||
|| ಓಂ ನಮಃ ಶಿವಾಯ ಮಂಗಳಂ ||

*******



ಮಂಗಳಂ ಭಗವಾನ್ ಶಂಭೋ | ಮಂಗಳಂ ವೃಷಭಧ್ವಜ ||
ಮಂಗಳಂ ಪಾರ್ವತೀನಾಥ | ಮಂಗಳಂ ಭಕ್ತವತ್ಸಲಾ ||





ಅನಾಯಾಸೇನ ಮರಣಂ, ವಿನಾ ಧೈನ್ಯೇನ ಜೀವನಮ್ |

ದೇಹಾಂತೇ ತವ ಸಾಯುಜ್ಯಮ್, ದೇಹಿಮೇ ಪಾರ್ವತೀಪತೇ ||